ಉಚಿತ ಪ್ರತಿಗಳಿಗಾಗಿ ಮತ್ತು
ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ನಮ್ಮ ವಿಳಾಸ:
**ದ ಕ್ರಿಸ್ಟಡೆಲ್ಫಿಯನ್ಸ್**
ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್
ಬೆಂಗಳೂರು - 560 005



# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 2

* ಆತ ಜೀವವನ್ನು ರಕ್ಷಿಸುವವನಾಗಿದ್ದಾನೆ
* ದಾವೀದ –ದೇವರಿಂದ ಆರಿಸಲ್ಪಟ್ಟವನು
* ಸತ್ಯವೇದದ ಸತ್ಯಕ್ಕೆ ಆಧಾರಗಳು
* ಅಪರಿಚಿತ
* ಸಿರಿಯಾ ದೇಶದ ನಮಾನನ ಪಾಪ ನಿವೇದನೆ ಮತ್ತು ರೋಗಪರಿಹಾರ

## ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯುವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.


**Co-ordinator : Linus Daniel**

**e-mail : info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.



### ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು

ಚೈತ್ರ ಸ್ವರೂಪ : ಕಾರ್ಯ ನಿರ್ವಹಣೆ, ಪುನರವಲೋಕನ ಮತ್ತು ಡಿ.ಟಿ.ಪಿ ಸಂಯೋಜಕರು.

ರೆವರೆಂಡ್ ರಾಸ್‌ಪಾಲ್‌ರವರಿಗೆ ವಿಶೇಷ ಕೃತಜ್ಞತೆಗಳು


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ಆತ ಜೀವವನ್ನು ರಕ್ಷಿಸುವವನಾಗಿದ್ದಾನೆ

ಪ್ರಪಂಚದಲ್ಲಿ ಒಂದು ಮಾತು ಪ್ರಚಲಿತದಲ್ಲಿದೆ, ಅದೇನೆಂದರೆ ನಿಮ್ಮನ್ನು ಸಾಯಿಸಲು ಪ್ರಪಂಚದ ಎಲ್ಲಾ ದೇಶಗಳಿಗಿಂತ ಅಧಿಕವಾದ ಮಾರ್ಗಗಳು ಆಸ್ಟ್ರೇಲಿಯಾದಲ್ಲಿವೆ. ಏಕಂದರೆ ಆಸ್ಟ್ರೇಲಿಯಾ ಖಂಡದಲ್ಲಿ ಪ್ರಪಂಚದ ಅತ್ಯಂತ ವಿಷಭರಿತ ಹಾವುಗಳ ಮೊದಲ ಹತ್ತು ಪ್ರಭೇದಗಳು ಆಸ್ಟ್ರೇಲಿಯಾದಲ್ಲಿವೆ, ಅದೇರೀತಿ ಅತ್ಯಂತ ವಿಷಭರಿತ ಜೆಲ್ಲಿ ಮೀನುಗಳ ಐದು ಪ್ರಭೇದಗಳು ಆಸ್ಟ್ರೇಲಿಯದ ಸಾಗರಗಳಲ್ಲಿವೆ, ಜೊತೆಗೆ ಶಾರ್ಕ್ ಮೀನುಗಳು ಮತ್ತು ಮೊಸಳೆಗಳಿವೆ. ಅವುಗಳಿಂದ ನಾವು ತಪ್ಪಿಸಿಕೊಳ್ಳಬಹುದು ಎಂದುಕೊಂಡರೆ, ಅಲ್ಲಿನ ಸಾಗರ ವಿಚಿತ್ರವಾಗಿ ವರ್ತಿಸುವ ಮಹಾ ಅಲೆಗಳು ಮತ್ತು ಚಂಡಮಾರುತಗಳಿಂದ ಕೂಡಿದೆ, ಅವುಗಳ ಪ್ರಭಾವ ಸಾಗರ ತೀರಗಳಿಂದ ಬಹಳ ದೂರದವರೆಗೂ ಅಪ್ಪಳಿಸಿ ನಾಶನಕ್ಕೆ ಕಾರಣವಾಗಿವೆ. ಸಮುದ್ರ ಸಾಗರಗಳಿಂದ ಇಷ್ಟೊಂದು ಅಪಾಯಗಳಿದ್ದರೂ, ಸಾಗರ ತೀರಗಳು ಅತ್ಯಧಿಕವಾಗಿ ಜನರನ್ನು ಆಕರ್ಷಿಸಿವೆ ಮತ್ತು ಜನರು ಈಜಾಡಲು, ಸರ್ಫ್(ನೀರಾಟ)ಮಾಡಲು ಮುಗಿಬೀಳುತ್ತಿರುತ್ತಾರೆ. ಎಷ್ಟೇ ಅಪಾಯಗಳಿದ್ದರೂ ಸಿಡ್ನಿ ಪ್ರಾಂತ್ಯದ ಬೊಂಡಿ ಬೀಚ್ ಸುಂದರವಾದ ಸಮುದ್ರ ತೀರವಾಗಿದ್ದು ಮೈಲುಗಳವರೆಗೆ ನೇರವಾದ, ವಿಶಾಲವಾದ ಚಿನ್ನದ ಬಣ್ಣದ ಮರಳಿನಿಂದ ಕೂಡಿದೆ. ಬೊಂಡಿ ಬೀಚ್ ಈಜುಗಾರರ ಮತ್ತು ನೀರಾಟವಾಡುವವರ ಸ್ವರ್ಗವೆನಿಸಿದೆ.

## ಜೀವ ತೆಗೆಯುವಂತದು

ಸಮುದ್ರವು ಅತ್ಯಧಿಕವಾದ ಮತ್ತು ಅಪಾರವಾದ ಶಕ್ತಿಯಿಂದ ಕೂಡಿರುವಂತಹುದಾಗಿದೆ, ಸಮುದ್ರದ ಕಾರ್ಯಗಳನ್ನು ಊಹೆಮಾಡಲು ಸಾಧ್ಯವಿಲ್ಲ. ಸಮುದ್ರದ ಬಗ್ಗೆ ಚೆನ್ನಾಗಿ ತಿಳಿದಿರುವವರು, ಈಜುಗಾರರು ಮತ್ತು ನೀರಾಟವಾಡುವವರು ಸಹ ಅನೇಕಬಾರಿ ಸಮುದ್ರದ ಅಲೆಗಳ ವೇಗವನ್ನು ಊಹಿಸಲು ವಿಫಲವಾಗುತ್ತಾರೆ. ಸಮುದ್ರದಲ್ಲಿ ಈ ರೀತಿಯ ತೀಕ್ಷ್ಣವಾದ, ವೇಗವಾದ ಅಲೆಗಳ ಮುಂದೆ ಎಂತಹವರು ಸಹ ಸಿಕ್ಕಿಕೊಂಡ ಸಂದರ್ಭಗಳಿವೆ. ಇದಕ್ಕೆ ಉದಾಹರಣೆಯಾಗಿ ನಾವು 1938ರ ಫೆಬ್ರವರಿ ತಿಂಗಳಿನ ಭಾನುವಾರ ಒಂದು ಕರಾಳದಿನವಾಗಿದ್ದು "ಕಪ್ಪು ಭಾನುವಾರ"(ಬ್ಲ್ಯಾಕ್ ಸಂಡೇ) ಎಂದೇ ಪ್ರಸಿದ್ಧಿಯಾಗಿದೆ– ಅಂದು ಅಪ್ಪಳಿಸಿದ ಬೃಹತ್ ಅಲೆಗಳಲ್ಲಿ ನೂರಾರುಜನ ಈಜುಗಾರರು ಸಿಕ್ಕಿಕೊಂಡರು, ಅವರಲ್ಲಿ ಐದುಮಂದಿ ಸಮುದ್ರದಲ್ಲಿ ಮುಳುಗಿಹೋದರು, ಮಿಕ್ಕವರು ಸಂಕಷ್ಟಕ್ಕೆ ಸಿಲುಕಿ ರಕ್ಷಿಸಲ್ಪಟ್ಟರು. ಅವರಲ್ಲಿ ಅನೇಕರ ಸ್ಥಿತಿ ಗಂಬೀರವಾಗಿತ್ತು, ಅಂದು ಅವರನ್ನು ಉಳಿಸಿದಂತ "ಬೊಂಡಿ ಸರ್ಫ್ ಬಾತರ್ಸ್ ಲೈಫ್ ಸೇವಿಂಗ್ ಕ್ಲಬ್"ರವರಿಗೆ ಕೃತಜ್ಞತೆ ತಿಳಿಸಬೇಕಾಗಿದೆ. ಈ ಕ್ಲಬ್ ಸದರಿ ಮೇಲ್ಕಂಡ ದುರಂತಕ್ಕಿಂತ 31ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿದ್ದು, ಅಂದಿನ ಕಾರ್ಯದಿಂದ ಆ ಕ್ಲಬ್‌ನ ಗೌರವ ಹೆಚ್ಚಾಯಿತು. ಕಪ್ಪು ಭಾನುವಾರದ ದುರಂತದ ದಿನ ಜನರ ಜೀವತೆಗೆಯಲು ಕಾರಣವಾದ ಸಮುದ್ರದ ಅಲೆಗಳಿಂದ ಈ ಕ್ಲಬ್ ಅನೇಕರನ್ನು ರಕ್ಷಿಸಿತು, ಆದರೆ ಆಸ್ಟ್ರೇಲಿಯಾದ ಸಮುದ್ರತೀರಗಳಲ್ಲಿ ವರ್ಷಕ್ಕೆ ಸರಾಸರಿ 58 ಮಂದಿ ನೀರಿನಲ್ಲಿ ಮುಳುಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಏನಾದರೂ ಜೀವರಕ್ಷಕ ತಂಡಗಳು ಕಾರ್ಯನಿರತವಾಗಿರದಿದ್ದರೆ ನೀರಿನಲ್ಲಿ ಮುಳುಗಿ ಜೀವ ಕಳೆದುಕೊಳ್ಳುವವರ ಸಂಖ್ಯೆ ಇನ್ನೂ ಅಧಿಕವಾಗುತ್ತಿತ್ತು, ಅವರ ಈ ಕೆಲಸ ಆಸ್ಟ್ರೇಲಿಯಾ ದೇಶದಲ್ಲಿ ಬಹುಮುಖ್ಯ ಪಾತ್ರವಹಿಸುತ್ತಿದೆ, ಈ ಸಂಘಟನೆಗಳು ಸ್ವಸಹಕಾರ ಸಂಘಗಳಾಗಿದ್ದು ಸಾರ್ವಜನಿಕ ಹಿತಾಸಕ್ತಿಯ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅನೇಕ

ಜೀವಗಳನ್ನು ರಕ್ಷಿಸುತ್ತಿವೆ, ಜೊತೆಗೆ ಅನೇಕ ಸ್ಥಳಗಳನ್ನು ಅಪಾ0ಯಕರ ಎಂದು ಗುರುತಿಸಿ ಆ ಸ್ಥಳಗಳಿಗೆ ಜನರು ಹೋಗಿ ನೀರಿನಲ್ಲಿ ಅಪಾ0ಯ ಎದುರಿಸದಂತೆ ಪ್ರ0ಯತ್ನಿಸುತ್ತಿವೆ. ಈ ರೀತಿ0ಯಾಗಿ ಜನಗಳನ್ನು ರಕ್ಷಿಸುವ ಕೆಲಸ ನಿರ್ವಹಿಸಿದರೂ ಸಹ ಸಮುದ್ರದಲ್ಲಿ ಜನರು ಜೀವಕಳೆದುಕೊಳ್ಳುತ್ತಲೇ ಇದ್ದಾರೆ.

## ಜೀವ ಕೊಡುವಂತಹವನು

ಕರ್ತನಾದ 0ಯೇಸುಕ್ರಿಸ್ತನು ಗಲಿಲಾ0ಯ ಸಮುದ್ರದ ಬಳಿಗೆ ಅನೇಕಬಾರಿ ಬೇಟಿಕೊಟ್ಟಿದ್ದನು. 0ಯೇಸುವಿನ ಶಿಷ್ಯರಲ್ಲಿ ಅನೇಕರು ಈ ಪ್ರಾಂತ್ಯಕ್ಕೆ ಸೇರಿದವರಾಗಿದ್ದರು ಮತ್ತು ಅವರುಗಳು ಮೀನುಗಾರರಾಗಿದ್ದರು, ಅವರು ದೋಣಿಗಳನ್ನು ನಡೆಸುವುದರಲ್ಲಿ ಮತ್ತು ಮೀನುಗಾರಿಕೆ0ಯಲ್ಲಿ ಪರಿಣಿತಿ ಹೊಂದಿದವರಾಗಿದ್ದರು. 0ಯೇಸುಕ್ರಿಸ್ತ ಒಂದು ಸಾರಿ ಜನರಿಗೆ ಬೋಧನೆಮಾಡುವ ಸಮ0ಯದಲ್ಲಿ ಅತ್ಯಧಿಕ ಜನರ ಪರಿಣಾಮವಾಗಿ ಆತನಿಗೆ ನಿಂತುಕೊಳ್ಳಲು ಸ್ಥಳ ಸಿಕ್ಕದೆ ಈ ಸಮುದ್ರದ ದೋಣಿ0ಯಲ್ಲೇ ಕುಳಿತು ಜನರಿಗೆ ಸುವಾರ್ತೆ0ಯನ್ನು ಸಾರಿದನು. ಅದೇರೀತಿ ಮತ್ತೊಂದು ಬಾರಿ ಈತ ದೋಣಿ0ಯಲ್ಲಿ ಪ್ರ0ಯಾಣಮಾಡುವಾಗ ಆ0ಯಾಸದಿಂದ ನಿದ್ರೆಹೋಗಿದ್ದನು. ಆ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಚಂಡಮಾರುತ ಉಂಟಾಗಿ ಅಲೆಗಳ ಬೋರ್ಗರೆತ ಹೆಚ್ಚಿತು, ಗಲಿಲಾ0ಯ



ಸಮುದ್ರವು ಇದ್ದಕ್ಕಿದ್ದಹಾಗೆ ಬಿರುಗಾಳಿಗೆ ಸಿಲುಕಿ ಅಲೆಗಳ ಭ0ಯಂಕರ ಹೊಡೆತದಿಂದ ದೋಣಿ0ಯಲ್ಲಿದ್ದವರೆಲ್ಲರು, ನಾವು ಆ ಬಿರುಗಾಳಿ0ಯ ಅಲೆಗಳಿಗೆ ಸಿಲುಕಿ ಸಮುದ್ರದಲ್ಲಿ ಮುಳುಗಿಹೋಗುತ್ತೇವೆ ಎಂದು ತತ್ತರಿಸಿದರು. ಆಗ 0ಯೇಸುವಿನ ಶಿಷ್ಯರು 0ಯೇಸುಕ್ರಿಸ್ತನನ್ನು ಎಬ್ಬಿಸಿ ಅವನಿಗೆ ಈ ರೀತಿ ಹೇಳಿದರು– ''ಅವರು ಅವನನ್ನು ಎಬ್ಬಿಸಿ ಗುರುವೇ, ನಾವು ಮುಳುಗಿಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ?'' (ಮಾರ್ಕ 4:38) ಎಂದು ಕೇಳಿದರು. ಅವರುಗಳು ಮೇಲಿನಂತೆ ಕೇಳುವ ಸಂದರ್ಭದಲ್ಲಿ ನಾವು 0ಯಾರಿಗೆ 0ಯಾವ ಪ್ರಶ್ನೆ0ಯನ್ನು ಕೇಳಿದ್ದೇವೆ ಎಂಬುದನ್ನು ಆಲೋಚಿಸಲಿಲ್ಲ, ಏಕೆಂದರೆ ಅವರಿಗೆ ಆ ಸಂದರ್ಭದಲ್ಲಿ ಅಷ್ಟೊಂದು ಭ0ಯ ಆವರಿಸಿತ್ತು. ಆದರೆ 0ಯೇಸುಕ್ರಿಸ್ತನ ಸಂಪೂರ್ಣ ಜೀವಿತ ದೇವರು ನಮಗೆ ನೀಡಿರುವ ರಕ್ಷಣೆ0ಯ ಮಾದರಿ0ಯಾಗಿತ್ತು ಮತ್ತು ಆತ ಈ ವಿಷ0ಯವನ್ನು ಅನೇಕಬಾರಿ ತನ್ನಕಾರ್0ಯಗಳಮೂಲಕಮಾನವರು ನಾಶವಾಗುವುದನ್ನು ತಪ್ಪಿಸಿ ಕಾಪಾಡಿದ್ದನು. ಈ ಒಂದು ಕಾರ್0ಯಕ್ಕಾಗಿ ಅಂದರೆ ಮಾನವರ ಜೀವದ ರಕ್ಷಣೆಗಾಗಿ0ಯೇ 0ಯೇಸುಕ್ರಿಸ್ತ ಜನಿಸಿ ನಮಗಾಗಿ0ಯೇ ಆತ ತನ್ನ ಪ್ರಾಣವನ್ನು ಅರ್ಪಿಸಿದನು, ಆ ಕಾರ್0ಯದ ಮೂಲಕ ಮಾನವರಿಗೆ ನಿತ್ಯಜೀವದ ಮಾರ್ಗವನ್ನು ಸಿದ್ದಮಾಡಿದನು. 0ಯೇಸುಕ್ರಿಸ್ತ ಜೀವದ ರಕ್ಷಕ ಮತ್ತು ಜೀವವನ್ನು ಕೊಡುವವನಾಗಿದ್ದಾನೆ, ಅಂತಹವನನ್ನು ಮೇಲಿನಸಂದರ್ಭದಲ್ಲಿ ಆತನ



ಜನರು ನಾವು ನಾಶವಾಗಿ ಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ?(ಮಾರ್ಕ 4:38) ಎಂದು ಆಪಾದನೆ ಮಾಡಿದರು, ಆ ಸಂದರ್ಭದಲ್ಲಿ 0ಯೇಸುವಿಗೆ ಇಡೀ ಲೋಕಕ್ಕೆ ಜೀವನೀಡುವ ವಿಷ0ಯವಾಗಿ ದೀರ್ಘ ಉಪನ್ಯಾಸಮಾಡುವ ಸಮ0ಯವಿರಲಿಲ್ಲ, ಆದರೆ ಆ ಜನಗಳಿಗೆ ಅರ್ಥವಾಗುವ ರೀತಿ0ಯಲ್ಲಿ ತನ್ನ ಒಂದು ಕಾರ್0ಯದ ಮೂಲಕ ತೋರ್ಪಡಿಸಿದ್ದಾನೆ, ಅದನ್ನು –''ಆತನು ಎದ್ದು ಗಾಳಿ0ಯನ್ನು ಗದರಿಸಿ ಸಮುದ್ರಕ್ಕೆ ಸುಮ್ಮನಿರು ಮೊರೆಯಿಡಬೇಡ ಎಂದು ಅಪ್ಪಣೆ ಕೊಟ್ಟನು, ಕೊಡುತ್ತಲೇ ಗಾಳಿನಿಂತುಹೋಗಿ ಎಲ್ಲಾ ಶಾಂತವಾಯಿತು. ತರುವಾ0ಯ ಆತನು ಅವರನ್ನು 0ಯಾಕೆ ಧೈರ್0ಯಗೆಡುತ್ತೀರಿ? ಇನ್ನೂ ನಿಮಗೆ ನಂಬಿಕೆಯಿಲ್ಲವೋ ಎಂದು ಕೇಳಲು ಅವರು ಭ0ಯಪಟ್ಟು– ಈತನು 0ಯಾರಿರಬಹುದು? ಗಾಳಿ0ಯೂ, ಸಮುದ್ರವೂ ಸಹ ಈತನು ಹೇಳಿದಹಾಗಿ ಕೇಳುತ್ತವಲ್ಲಾ ಎಂದು ತಮ್ಮತಮ್ಮೊಳಗೆಮಾತಾಡಿಕೊಂಡರು'' (ಮಾರ್ಕ 4:39–41).

## 0ಯಾರು ಆತ?

ನೀವು ಒಂದು ದೋಣಿ0ಯಲ್ಲಿರುವಂತಹ ಸಂದರ್ಭದಲ್ಲಿ ಮೇಲಿನ ರೀತಿ0ಯ ಬಿರುಗಾಳಿ ಬಂದು ಅಲೆಗಳ ಹೊಡೆತಕ್ಕೆ ದೋಣಿಸಿಲುಕಿ ಮುಳುಗುವ ಸ್ಥಿತಿ0ಯನ್ನು ಕಲ್ಪನೆ ಮಾಡಿಕೊಳ್ಳಿ, ಆಗ ನಿಮಗೆ ಸಾವು ನಿಶ್ಚಿತ ಎನಿಸುತ್ತದೆ, ಅಂತಹ ಕಠಿಣವಾದ ಪರಿಸ್ಥಿತಿ0ಯಲ್ಲಿ ನಿಮಗೆ ಒಬ್ಬ ಜೀವರಕ್ಷಕನ ಅವಶ್ಯಕತೆ ಇದೆ ಎನಿಸುತ್ತದೆ ಅಲ್ಲವೆ! ಅಂತಹ ಸಂದರ್ಭದಲ್ಲಿ ನಿಮಗೆ ಆಶ್ಚರ್0ಯಕರ ರೀತಿ0ಯಲ್ಲಿ ರಕ್ಷಣೆ ಸಿಕ್ಕಿದರೆ ನಿಮ್ಮ ಜೀವದ ಮರೆ0ಯಲಾಗದ ಕ್ಷಣ ಅದಾಗಿರುತ್ತದೆ ಅಲ್ಲವೇ. ನಿಮ್ಮ ರಕ್ಷಕ ಸಮುದ್ರದ ಬಿರುಗಾಳಿ ಮತ್ತು ಅಲೆಗಳಿಂದ ರಕ್ಷಿಸಿದಾಗ ನಿಮಗೆ ಹೇಗೆ ಅನಿಸುತ್ತದೆ? ನಿಮಗೆ ಸಹಾ0ಯ ಮಾಡಿದಂತ ಆ ವ್ಯಕ್ತಿ0ಯನ್ನು ನೀವೆಂದಿಗೂ ಮರೆ0ಯಲು ಸಾದ್ಯವಿಲ್ಲ, ಅದೇರೀತಿ ಅವನ ಶಕ್ತಿ0ಯನ್ನು ನೀವು ಗೌರವಿಸುತ್ತೀರಿ ಅಲ್ಲವೇ. ಅದೇರೀತಿ ಇಂದು ಪ್ರಪಂಚವೆಲ್ಲಾ ಅತ್ಯಂತ ಅಪಾ0ಯಕರ ಸ್ಥಿತಿ0ಯಲ್ಲಿದೆ. ಎಲ್ಲಾ ಅಪಾ0ಯಗಳಿಂದ ತಪ್ಪಿಸಿಕೊಳ್ಳಬೇಕು ಎಂದು ದೂರ ಹೋದಹಾಗೆಲ್ಲಾ ಅಪಾ0ಯಗಳು ಹೆಚ್ಚುತ್ತಲೇ ಇವೆ, ಹಾಗಾಗಿ ಇಂದಿನ ಜನತೆಗೆ ಈ ಎಲ್ಲಾ ಅಪಾ0ಯಗಳಿಂದ, ತೊಂದರೆಗಳಿಂದ ರಕ್ಷಣೆ ಬೇಕಾಗಿದೆ. ಆ ರಕ್ಷಣೆ ಆತನ(0ಯೇಸುಕ್ರಿಸ್ತ) ಕೈ0ಯಲ್ಲಿದೆ.

## ನಿತ್ಯಜೀವ

ಎಲ್ಲರಂತೆ ನಾವು ಕೂಡ ಇಂದು ಪ್ರಪಂಚದಲ್ಲಿ ಜೀವಿತವನ್ನು ನಡೆಸುತ್ತಿದ್ದೇವೆ, ಆದರೆ ನಮಗೆಲ್ಲಾ ತಿಳಿದಿದೆ ಇಂದಲ್ಲ ನಾಳೆ ನಾವುಗಳುಸಹ ಒಂದಲ್ಲ ಒಂದು ವಿಧದಲ್ಲಿ ಮರಣವನ್ನು ಹೊಂದುತ್ತೇವೆ, ಅದು ಸ್ವಲ್ಪಬೇಗವಾಗಿರಬಹುದು ಅಥವಾ ಸ್ವಲ್ಪ ನಿಧಾನವಾಗಿ0ಯಾಗಬಹುದು. ಆದರೆ ನಮಗೆ ಮರಣ ನಿಶ್ಚಿತ, ಹಾಗಾಗಿ ನಮಗೆ ಮರಣದಿಂದ ತಪ್ಪಿಸಿ ಜೀವಕೊಡುವ ಜೀವದ ರಕ್ಷಕನ ಅವಶ್ಯಕತೆಯಿದೆ– ಆ ಜೀವದ ರಕ್ಷಕನನ್ನು ದೇವರೇ ಕೊಟ್ಟಿದ್ದಾನೆ ಆತನೇ ಕರ್ತನಾದ 0ಯೇಸುಕ್ರಿಸ್ತನಾಗಿದ್ದಾನೆ. ಆದ್ದರಿಂದ ನಾವು ಆತನ ವಾಕ್ಯಗಳನ್ನು ಕೇಳಿದರೆ ಮತ್ತು ಅವುಗಳನ್ನು ಅನುಸರಿಸಿದರೆ ನಾವು ಸದಾ ಜೀವಿಸಬಹುದು–ಹೌದು **''ನಿತ್ಯಜೀವ''** ಹೊಂದಬಹುದು. ಈ ರೀತಿ0ಯಾದ ಗುಣವನ್ನು ಹೊಂದಿರುವಂತ ಮತ್ತು ನಮಗೆ ಕೊಡುವ ಅಧಿಕಾರ ಹೊಂದಿರುವ ಏಕೈಕ ವ್ಯಕ್ತಿ 0ಯೇಸುಕ್ರಿಸ್ತ ಆಗಿದ್ದಾನೆ. ಈತ ನಮ್ಮನ್ನು ಶಾಶ್ವತ ಮರಣದಿಂದ ತಪ್ಪಿಸಿ ನಿತ್ಯಜೀವ ಕೊಡುವವನಾಗಿದ್ದಾನೆ. ಆದ್ದರಿಂದ ನಾವು ಸತ್ಯವಾಗಿ ಆತನನ್ನು ಪಡೆ0ಯಲು ಎಷ್ಟು ಪ್ರ0ಯತ್ನವನ್ನು ಮಾಡುತ್ತೇವೋ ಅಷ್ಟನ್ನು ಆತ ದ0ಯಪಾಲಿಸುವವನಾಗಿದ್ದಾನೆ.

# ದಾವೀದ–ದೇವರಿಂದ ಆರಿಸಲ್ಪಟ್ಟವನು

ಅಮಾಲೇಕ್ಯರನ್ನು ಸಂಪೂರ್ಣವಾಗಿ ನಾಶಮಾಡಬೇಕು ಎಂಬ ದೇವರ ಆಜ್ಞೆ0ಯನ್ನು ಇಸ್ರಾ0ಯೇಲ್ಯರ ಅರಸಾದ ಸೌಲನು ಸಂಪೂರ್ಣಹೃದ0ಯದಿಂದ ಪಾಲಿಸಲಿಲ್ಲ. ಅದಕ್ಕೆ ಬದಲಾಗಿ ತನಗೆ ಇಷ್ಟಬಂದ ರೀತಿ0ಯಲ್ಲಿ ನಡೆದುಕೊಂಡನು. ಸೌಲನು ದೇವರ ಆಜ್ಞೆಗಳನ್ನು ಸಂಪೂರ್ಣ ಹೃದ0ಯದಿಂದ ಕೈಗೊಂಡು ನಡೆ0ಯಲು ಪ್ರ0ಯತ್ನಿಸಲಿಲ್ಲ. ಅವನ ಈ ರೀತಿ0ಯ ದೇವವಿರೋಧಿ ಗುಣ ಮತ್ತು ನಡತೆ0ಯ ಪರಿಣಾಮವಾಗಿ(1ಸಮುವೇಲ 13:8–9,14 ಮತ್ತು 15:16–23) ದೇವರು ಸೌಲನನ್ನು ಇಸ್ರಾ0ಯೇಲ್ಯರ ಅರಸುತನದಿಂದ ತಳ್ಳಿಬಿಟ್ಟನು.

ಆದರೆ ತಂದೆ0ಯಾದ ದೇವರು ತನ್ನ ಮಕ್ಕಳಾದ ಇಸ್ರಾ0ಯೇಲ್ಯರನ್ನು ರಾಜನಿಲ್ಲದ ಅನಾಥರನ್ನಾಗಿ ಬಿಡಲಿಲ್ಲ. ಅವರನ್ನು ಪರಾಮರಿಸಲು ಮತ್ತು ತನ್ನ ಮಾರ್ಗದಲ್ಲಿ ನಡೆಸಲು ತನ್ನ ಹೃದ0ಯಕ್ಕೆ ಒಪ್ಪುವಂತಹ, ತನ್ನದೇ ಆ0ಯ್ಕೆ0ಯ(1ಸಮುವೇಲ 13:14, ಅ.ಕೃ 13:22) ಒಬ್ಬನನ್ನು ಆರಿಸಿಕೊಂಡನು. ಆತನೇ ಕುರುಬನಾಗಿರುವ ದಾವೀದನಾಗಿದ್ದಾನೆ. ಆತ ಅರಸನಾಗುವುದಕ್ಕಿಂತ ಮುಂಚಿತವಾಗಿ ತನ್ನ ತಂದೆ0ಯ ಮನೆ0ಯಲ್ಲಿ ಕುರಿಗಳನ್ನು ಕಾ0ಯುವವನಾಗಿದ್ದ, ಮುಂದೆ ಇಸ್ರಾ0ಯೇಲ್ಯರ ಅರಸನಾಗಿ ದೇವವಿರೋಧಿಗಳನ್ನು ನಾಶಮಾಡಿದನು.

ಈ ಚಿಕ್ಕ ಅಧ್ಯ0ಯನದಲ್ಲಿ ನಮ್ಮ ಗುರಿ0ಯೆಂದರೆ, ದೇವರು ಹೇಗೆ ಹೊರಗಿನ ತೋರಿಕೆ0ಯನ್ನು ನೋಡದೆ ತನಗೆ ವಿಧೇ0ಯರಾಗಿರುವವರ ಹೃದ0ಯಗಳನ್ನು ನೋಡುವವನಾಗಿದ್ದಾನೆ ಮತ್ತು ಆತ ನಮ್ಮಲ್ಲಿ ಹೇಗೆ ಕಾ0ರ್ಯ ನಡೆಸುತ್ತಾನೆ ಎಂಬುದನ್ನು ತಿಳಿಸುವುದೇ ಆಗಿದೆ.

## ಸಮುವೇಲನನ್ನು ಬೇತ್ಲೆಹೇಮಿಗೆ ಕಳುಹಿಸಿದ್ದು (1ಸಮುವೇಲ16:1–5)

ಸೌಲನು ದೇವರಿಂದ ವಿಮುಖನಾಗಿ ದೇವರಿಂದ ತಿರಸ್ಕರಿಸಲ್ಪಟ್ಟ ಕಾರಣದಿಂದ ಸಮುವೇಲನು ಅವನಿಗಾಗಿ ಬಹುದಿವಸಗಳವರೆಗೆ ಶೋಕಿಸುತ್ತಿದ್ದನು. ಆಗ ದೇವರು ಸಮುವೇಲನಿಗೆ “0ಯೆಹೋವನು ಸಮುವೇಲನಿಗೆ –ನಾನು ಸೌಲನನ್ನು ಇಸ್ರಾ0ಯೇಲ್ಯರ ಅರಸನಾಗುವುದಕ್ಕೆ ಅ0ಯೋಗ್ಯನೆಂದು ತಳ್ಳಿಬಿಟ್ಟೆನಲ್ಲಾ; ನೀನು ಅವನಿಗೋಸ್ಕರ ಎಷ್ಟರವರೆಗೆ ದುಃಖಿಸುತ್ತಿರುವಿ? ಕೊಂಬನ್ನು ಎಣ್ಣೆ0ಯಿಂದ ತುಂಬಿಸಿಕೊಂಡು ಬಾ; ನಾನು ನಿನ್ನನ್ನು ಬೇತ್ಲೆಹೇಮಿನವನಾದ ಇಷ0ಯನ ಬಳಿಗೆ ಕಳುಹಿಸುತ್ತೇನೆ; ಅವನ ಮಕ್ಕಳಲ್ಲೊಬ್ಬನನ್ನು ಅರಸನನ್ನಾಗಿ ಆರಿಸಿಕೊಂಡಿದ್ದೇನೆ ಎಂದು ಹೇಳಿದನು(1ನೇ ವಚನ). ಈ ವಿಷ0ಯವನ್ನು ಮುಂದೆ ದೇವರು ದಾವೀದನ ಮುಖಾಂತರ ಕೀರ್ತನೆಗಳಲ್ಲಿ ತಿಳಿಸಿದ್ದಾನೆ “– ನನ್ನ ಸೇವಕನಾದ ದಾವಿದನನ್ನು ಕಂಡು ಪರಿಶುದ್ಧ ತೈಲದಿಂದ ಅಭಿಷೇಕಿಸಿದ್ದೇನೆ” (ಕೀರ್ತನೆಗಳು 89:20).

ಸಮುವೇಲ ಎಲ್ಲರಿಗೆ ತಿಳಿ0ಯುವಂತೆ ಬೇತ್ಲೆಹೇಮಿಗೆ ಹೋಗಲು ಸಾಧ್ಯವಾಗಲಿಲ್ಲ, ಏಕಂದರೆ ಅಂದು ಇಸ್ರಾ0ಯೇಲ್ಯರ ಅರಸನಾದ ಸೌಲನಿಗೆ ಬದಲಾಗಿ ಬೇರೊಬ್ಬ ಅರಸನನ್ನು ನೇಮಿಸುತ್ತಾನೆ ಎಂದು ತಿಳಿದರೆ ಆತನ ಕೋಪಕ್ಕೆ ಗುರಿ0ಯಾಗಬೇಕಾಗಿತ್ತು, ಜೊತೆಗೆ ಸೌಲನು ದ್ವೇಷ, ಅಸೂ0ಯೆ, ಚಂಚಲವುಳ್ಳವನೂ, ಕ್ರಮವಿಲ್ಲದ ಕಡುಕೋಪಿ0ಯಾಗಿದ್ದನು. ಆದ್ದರಿಂದ ಸಮುವೇಲನು ಬೇತ್ಲೆಹೇಮಿನಲ್ಲಿ 0ಯಜ್ಞಾರ್ಪಣೆ ಮಾಡುವಂತೆ ದೇವರಿಂದ ಅಪ್ಪಣೆ ಬಂದಿದೆ ಎಂದು ತಿಳಿಸಿ,



0ಯಜ್ಞವರ್ಪಿಸಲು ಬೇತ್ಲೆಹೇಮಿಗೆ ಹೋದನು. ಈ ರೀತಿ0ಯಾದ ಕಾ0ರ್ಯ ಮೊದಲನೋಟಕ್ಕೆ 0ಯುಕ್ತಿ0ಯಾದ ಮತ್ತು ರಾಜನಿಂದ ತಪ್ಪಿಸಿಕೊಳ್ಳುವ ಕಾ0ರ್ಯದಂತೆ ಕಾಣಿಸಿದರೂ, ಇದರಲ್ಲಿ ದೇವರ ಮಹಾ0ಯೋಜನೆ0ಯ ಮೊದಲ ಹೆಜ್ಜೆ0ಯಾಗಿದೆ. ನಾವು 0ಯಾವುದೇ ಘಟನೆ0ಯನ್ನು ಆ0ಯಾ ಸಂದರ್ಭಕ್ಕೆ ಅನುಗುಣವಾಗಿ ಅವಲೋಕಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಏನಾದರೂ ಸೌಲನಿಗೆ ಬದಲಾಗಿ ಇಷ0ಯನ ಮಕ್ಕಳಲ್ಲಿ ಒಬ್ಬನನ್ನು ರಾಜನಾಗಿ ದೇವರು ಆರಿಸಿದ್ದಾನೆ ಎಂಬ ವಿಷ0ಯವನ್ನು ಸಮುವೇಲ ಪ್ರಚಾರಮಾಡಿದ್ದರೆ, ಸೌಲ ಇಷ0ಯನ ಮನೆ0ಯವರ ವಿರುದ್ಧ ಕತ್ತಿ0ಯನ್ನೆತ್ತಬಹುದಿತ್ತು ಮತ್ತು ಆ ಕುಟುಂಬದ ನಾಶನಕ್ಕೆ ಕಾರಣವಾಗುತ್ತಿತ್ತು. ಇದಕ್ಕೆ ಉದಾಹರಣೆ0ಯೇ ಅನೇಕ ಶತಮಾನಗಳ ನಂತರ 0ಯೇಸುಕ್ರಿಸ್ತ ಹುಟ್ಟಿದಂತಹ ಸಂದರ್ಭದಲ್ಲಿ 0ಯೆಹೂದ್ಯರ ಅರಸ ಹುಟ್ಟಿದ್ದಾನೆ ಎಂಬ ವಿಷ0ಯ ರೋಮ್ ಸಾಮ್ರಾಜ್ಯದ ಅಧಿಪತಿ0ಯಾದ ಹೆರೋದನಿಗೆ ತಿಳಿದುಬಂದಾಗ ಆ ಸಮ0ಯದಲ್ಲಿ ಜನಿಸಿದ ಎಲ್ಲಾ 0ಯೆಹೂದ್ಯ ಮಕ್ಕಳನ್ನು(ಕೂಸುಗಳನ್ನು) ಕೊಲ್ಲಿಸಿರುವುದನ್ನು ನೋಡಬಹುದು.

ಸಮುವೇಲನು ಬೇತ್ಲೆಹೇಮಿಗೆ ಬಂದಾಗ ಅಲ್ಲಿನ ಹಿರಿ0ಯರಿಗೆ ಭ0ಯ, ಗಾಬರಿ, ತಲ್ಲಣಗಳು ಉಂಟಾದವು. ಏಕಂದರೆ ಸಮುವೇಲನು ಪಾಲಿಸುತ್ತಿದ ಸ್ಥಳಗಳಲ್ಲಿ ಬೇತ್ಲೆಹೇಮು ಸೇರಿರಲಿಲ್ಲ(1ಸಮುವೇಲ 7:16). ಆದ್ದರಿಂದ ಅಲ್ಲಿನ ಹಿರಿ0ಯರು ಸಮುವೇಲನ ಬರುವಿಕೆ ನಮಗೆ ಕೇಡಿನ ಸಮ0ಯದ ಮುಂತಿಳಿಸುವಿಕೆ0ಯೇ ಅಥವಾ **“ಶುಭಕರವಾಗಿದೆ0ಯೇ”** ಎಂದು ನಡುಗುತ್ತಾ ಕೇಳಿದರು. ಸಮುವೇಲನು ಶುಭಕರವಾಗಿದೆ ಎಂದುತ್ತರ ಕೊಟ್ಟಾಗ ನಿರಾಳವಾಗಿ ಮಾತಾಡಿದರು. ಸಮುವೇಲನು ಅವರಿಗೆ “0ಯೆಹೋವನಿಗೆ” 0ಯಜ್ಞವರ್ಪಿಸುವುದಕ್ಕೆ ಬಂದಿದ್ದೇನೆ, ನೀವು ನಿಮ್ಮನ್ನು ಶುದ್ಧಪಡಿಸಿಕೊಂಡು ನನ್ನ ಜೊತೆ0ಯಲ್ಲಿ 0ಯಜ್ಞಕ್ಕೆ ಬನ್ನಿರಿ(1ಸಮುವೇಲ 16:5) ಎಂದನು.

## ದೈವೀಕವಾದ ಆ0ಯ್ಕೆ (1ಸಮುವೇಲ 16:6–11)

ಇಷ0ಯನನ್ನು ಮತ್ತು ಅವನ ಮಕ್ಕಳನ್ನು 0ಯಜ್ಞಭೋಜನಕ್ಕೆ ವಿಶೇಷವಾಗಿ ಆಹ್ವಾನವನ್ನು ನೀಡಿದನು. ಆ 0ಯಜ್ಞಕ್ಕೆ ಇಷ0ಯ ಮತ್ತು ಅವನ ಮಕ್ಕಳುಗಳು ಬಂದಂತಹ ಸಂದರ್ಭದಲ್ಲಿ ಮೊದಲ ಮಗನಾದ ಎಲಿ0ಯಾಬನನ್ನು ನೋಡಿ ನಿಶ್ಚ0ಯವಾಗಿ 0ಯೆಹೋವನು ಆರಿಸಿಕೊಂಡವನು ಆತನ ಮುಂದೆ ಇದ್ದಾನೆ ಎಂದುಕೊಂಡನು. ಪ್ರವಾದಿ0ಯು ಇಲ್ಲಿ ಎಲಿ0ಯಾಬನ ಹೊರಗಿನ ಚೆಲುವಿಕೆ0ಯನ್ನು ಮತ್ತು ಆತನ ಮೈಕಟ್ಟನ್ನು ನೋಡಿ ಇವನೇ ಅರಸನಾಗಲು 0ಯೋಗ್ಯ ಎಂದುಕೊಂಡನು.

ಆದರೆ ಸಮುವೇಲನು ದೇವರನ್ನು ಕೇಳಲು “–ಆದರೆ 0ಯೆಹೋವನು ಸಮುವೇಲನಿಗೆ ನೀನು ಅವನ ಚೆಲುವಿಕೆ0ಯನ್ನು ನೀಳವನ್ನು ನೋಡಬೇಡ, ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. 0ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆ0ಯನ್ನು ನೋಡದೆ ಹೃದ0ಯವನ್ನೇ ನೋಡುವವನಾಗಿದ್ದಾನೆ” ಅಂದನು (1ಸಮುವೇಲ 16:17). ಈ ಪ್ರತಿಪಾದನೆ0ಯು ದೈವೀಕ ಪ್ರತಿಪಾದನೆ0ಯ ಸಿದ್ಧಾಂತವಾಗಿದೆ. ಈ ನಿ0ಯಮ ಕೇವಲ ದಾವೀದನನ್ನು ಅರಸನನ್ನಾಗಿ ನೇಮಕ ಮಾಡುವ ವಿಷ0ಯಕ್ಕೆ ಮಾತ್ರವಲ್ಲ, ದೇವರ ರಾಜ್ಯಕ್ಕೆ ಬರುವ ಪ್ರತಿ0ಯೊಬ್ಬರಿಗೆ ಅನ್ವ0ಯವಾಗುತ್ತದೆ(ಪ್ರಕಟನೆ 2:23). 0ಯೆಹೋವನು ಮಾನವರ ಹಾಗೆ ಎಂದೂ ಹೊರತೋರಿಕೆ0ಯನ್ನು ನೋಡುವವನಲ್ಲ ಹೃದ0ಯಗಳನ್ನೇ ಪರೀಕ್ಷಿಸುವವನಾಗಿದ್ದಾನೆ, **“ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ”** ಎಂಬುದರ ಅರ್ಥ ಅವನ ಹೃದ0ಯ ದೇವರ ದೃಷ್ಟಿಗೆ ಪರಿಶುದ್ಧವಾಗಿರಲಿಲ್ಲ ಎಂಬುದಾಗಿದೆ.

ಇಷಯನ ಮನೆಯಲ್ಲಿದ್ದ ಏಳುಮಂದಿ ಮಕ್ಕಳನ್ನು ದೇವರ ಮುಂದೆ ಬರಮಾಡಿದಾಗ ಅವರೆಲ್ಲರೂ ತಿರಸ್ಕರಿಸಲ್ಪಟ್ಟರು, **"ಯೆಹೋವನು ಅವರನ್ನು ಆರಿಸಿಕೊಳ್ಳಲಿಲ್ಲ"** ಎಂದು ಸಮುವೇಲನು ಇಷಯನಿಗೆ ತಿಳಿಸಿದನು. ಎಂಟನೆಯ ಮಗನು ಬರುವವರೆಗೂ ಊಟಕ್ಕೆ ಕೂತುಕೊಳ್ಳಬಾರದು ಎಂದು ಸಮುವೇಲನು ಇಷಯನಿಗೆ ತಿಳಿಸಿದನು.

## ಅಭಿಷೇಕ (1ಸಮುವೇಲ 16:12–13)

ದಾವೀದ **"ಕಿರಿಯ"**ನಾದರೂ ದೇವರು ಒಪ್ಪುವಂತಹವನಾಗಿದ್ದ. ದಾವೀದ ತನ್ನ ತಂದೆಯ ಕುರಿಗಳನ್ನು ಅಡವಿಯಲ್ಲಿ ಮೇಯಿಸುವವನಾಗಿದ್ದ. ಈ ಕಾರ್ಯ ಮುಂದೆ ಆತನಿಗೆ ದೇವರ ಮಕ್ಕಳಾದ ಇಸ್ರಾಯೇಲ್ಯರನ್ನು ಪಾಲಿಸುವ ಕೆಲಸಕ್ಕೆ ಸಹಕಾರಿಯಾಯಿತು(ಕೀರ್ತನೆಗಳು 78:70–72). ಸತ್ಯವೇದದ ಅನೇಕ ಮಹಾಪುರುಷರು ಕುರಿಕಾಯುವ ಕುರುಬರಾಗಿದ್ದರು, ಮುಂದೆ ದೇವರ ಮಹಾಕೆಲಸಗಳನ್ನು ನಡಿಸುವುದಕ್ಕೆ ಈ ಕೆಲಸ ಸಹಕಾರಿಯಾಗಿದೆ, ಮುಂದೆ ದೇವರು ಅವರನ್ನು ಈ ಕಾರ್ಯದಿಂದ ಬಿಡಿಸಿ ಮಹಾಕಾರ್ಯಗಳಿಗೆ ನೇಮಿಸಿದನು. ಅವರುಗಳೆಂದರೆ– ಹೇಬೆಲ, ಅಬ್ರಹಾಮ, ಇಸಾಕ, ಯಾಕೋಬ ಮತ್ತು ಮೋಶೆ. ದಾವೀದನಿಗೆ ತನ್ನ ಕುರಿಗಳ ಮೇಲೆ ಅಕ್ಕರೆಯಿತ್ತು, ಅವುಗಳಲ್ಲಿ ಪ್ರತಿಯೊಂದನ್ನು ದಾವೀದ ತಿಳಿದಿದ್ದನು. ಅವುಗಳನ್ನು ಸರಿಯಾದ ರೀತಿಯಲ್ಲಿ ನಡಿಸಿ ಹಸುರುಗಾವಲುಗಳಲ್ಲಿ ನೀರಿರುವ ಸ್ಥಳಗಳಲ್ಲಿ ತಂಗಿಸುತ್ತಿದ್ದನು. ಅವುಗಳನ್ನು ಕಾಡುಪ್ರಾಣಿಗಳ ಆಕ್ರಮಣದಿಂದ ರಕ್ಷಿಸುತ್ತಿದ್ದನು, ಜೊತೆಗೆ ತನ್ನ ಜೀವವನ್ನು ಕಾಡುಪ್ರಾಣಿಗಳ ಭೀಕರ ಆಕ್ರಮಣದಿಂದ ರಕ್ಷಿಸಿಕೊಳ್ಳುತ್ತಿದ್ದನು. ಈ ರೀತಿಯಾದ ಅನುಭವದಿಂದ ದಾವೀದನಿಗೆ ಬೇರೆಯವರ ಕಷ್ಟ ಸಂಕಟಗಳನ್ನು ಅರ್ಥಮಾಡಿಕೊಂಡು ಅವರಿಗೆ ಸಹಾಯಮಾಡುವ ಗುಣವು ಬೆಳವಣಿಗೆಯಾಯಿತು. ಆತ ಸಂಪೂರ್ಣವಾಗಿ ದೇವರಿಗೆ ತನ್ನನ್ನು ಒಪ್ಪಿಸಿಕೊಂಡವನಾದುದರಿಂದ ಮುಂದೆ ಇಸ್ರಾಯೇಲ್ಯರನ್ನು ಕಾಯುವ ಮಹಾಕುರುಬನಾದನು.

ದಾವೀದ ತನ್ನ ಜೀವಿತವನ್ನು ಕುರುಬನಾಗಿ ಕಳೆದುದರಿಂದ ಆತನಿಗೆ ದೇವರ ಕಾರ್ಯಗಳನ್ನು ತಿಳಿದುಕೊಳ್ಳಲು ಸಹಕಾರಿಯಾಯಿತು ಮತ್ತು ಯೆಹೋವನೊಬ್ಬನೇ ಎಲ್ಲಾದರ ಸೃಷ್ಟಿಕರ್ತನಾಗಿದ್ದಾನೆ ಎಂಬ ವಿಷಯ ಅರಿವಿಗೆ ಬಂದಿತು. ಆತ ಯೂದಾಯ ಬೆಟ್ಟಗಳಲ್ಲಿ ರಾತ್ರಿಕಳೆಯುವ ಸಮಯದಲ್ಲಿ ದೇವರ ಹಸ್ತದ ಕಾರ್ಯಗಳನ್ನು ನೋಡಿ(ಕೀರ್ತನೆಗಳು 19ನೇ ಅಧ್ಯಾಯ, ಮತ್ತು 119:9) ದೇವರ ನಿಯಮಗಳನ್ನು ಕಲಿತುಕೊಂಡನು.

ದಾವೀದನು ಕೆಂಬಣ್ಣದವನೂ, ಸುಂದರನೇತ್ರನೂ, ಗುಂಗುರು ಕೂದಲಿನವನೂ ನೋಟಕ್ಕೆ ರಮಣೀಯನೂ ಆಗಿದ್ದನು. ದಾವೀದನು ಸಮುವೇಲನ ಮುಂದೆ ನಿಂತಾಗ ದೇವರಿಂದ ಆಜ್ಞೆ ಹೊರಟಿತು. **"ಯೆಹೋವನು ಸಮುವೇಲನಿಗೆ ಎದ್ದು ಇವನನ್ನು ಅಭಿಷೇಕಿಸು; ನಾನು ಆರಿಸಿಕೊಂಡವನು ಇವನೇ ಎಂದು ಆಜ್ಞಾಪಿಸಿದನು"**(1ಸಮುವೇಲ 16:12). ಆಗ ಸಮುವೇಲನು ಎಣ್ಣೆಯ ಕೊಂಬನ್ನು ತೆಗೆದುಕೊಂಡು ಅವನನ್ನು ಅವನ ಸಹೋದರರ ಮಧ್ಯದಲ್ಲೇ ಅಭಿಷೇಕಿಸಿದನು. ಆ ಸಂದರ್ಭದಲ್ಲಿ ಅವನ ಸಹೋದರರು ಕಿರಿಯವನಾದ ದಾವೀದನ ಬಗ್ಗೆ ಏನಂದುಕೊಂಡರು ಎಂಬುದನ್ನು ಇಲ್ಲಿ ತಿಳಿಸಿಲ್ಲ, ಆದರೆ ಮುಂದಿನ ಅಧ್ಯಾಯಗಳಲ್ಲಿ ನೋಡುವಾಗ ಅವನ ಸಹೋದರರು ಅವನನ್ನು, ಯೋಸೇಫನ ಸಹೋದರರು ಯೋಸೇಫನನ್ನು ದ್ವೇಷಿಸಿದಂತೆಯೇ ದ್ವೇಷಿಸುತ್ತಿದ್ದರು ಎಂಬುದು(1ಸಮುವೇಲ 17:28, ಕೀರ್ತನೆಗಳು 23:5) ತಿಳಿದುಬರುತ್ತದೆ.



ದಾವೀದನಿಗೆ ಈ ರೀತಿ ಚಿಕ್ಕವಯಸ್ಸಿನಲ್ಲೇ ತನ್ನ ಹಿರಿಯ ಸಹೋದರರ ಮುಂದೆ ಅಭಿಷೇಕವಾದಾಗ ಆತ ಏನು ನೆನಸಿದ್ದನೋ ಇಲ್ಲಿ ತಿಳಿಸಿಲ್ಲ, ಆದರೆ ಇದೇ ಹಿನ್ನೆಲೆಯಲ್ಲಿ ದಾವೀದ ಕೀರ್ತನೆಗಳು 23ನೇ ಅಧ್ಯಾಯವನ್ನು ರಚಿಸಿರುವುದು ತಿಳಿದುಬರುತ್ತದೆ. ಅಭಿಷೇಕದ ನಂತರ ಸಮುವೇಲ ಮತ್ತು ದಾವೀದ ಒಟ್ಟಿಗೆ ಕುಳಿತು ಊಟಮಾಡಿದರು. ಈ ಅಭಿಷೇಕವು ದಾವೀದನಿಗೆ ಮೊದಲನೇ ಅಭಿಷೇಕವಾಗಿದೆ. ದಾವೀದನಿಗೆ ಒಟ್ಟು ಮೂರುಬಾರಿ ಬೇತ್ಲೆಹೇಮು, ಹೆಬ್ರೋನ್, ಮತ್ತು ಯೆರುಸಲೇಮಿನಲ್ಲಿ ಅಭಿಷೇಕವಾಯಿತು, ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ದೇವರ ಪವಿತ್ರಶಕ್ತಿಯಿಂದ ಸಮುವೇಲನ ಮುಖಾಂತರ ಅಭಿಷೇಕಿಸಲ್ಪಟ್ಟನು.

**ದಾವೀದ ಮತ್ತು ಆತನ ಸಂತಾನದ ಶ್ರೇಷ್ಠ ಪುತ್ರ**

*ಈ ಕೆಳಗಿನ ಪಟ್ಟಿ ದಾವೀದ ಮತ್ತು ಯೇಸುಕ್ರಿಸ್ತನಿಗೆ ಇರುವ ಹೋಲಿಕೆಗಳನ್ನು ತೋರಿಸುತ್ತದೆ*

| ದಾವೀದ | ಯೇಸುಕ್ರಿಸ್ತ |
|---|---|
| * ಸಮುವೇಲನ ಮುಖಾಂತರ ಇಷಯನ ಮನೆಯಲ್ಲಿ ಬೆಳಕಿಗೆ (ಪ್ರಖ್ಯಾತಿಗೆ) ಬಂದನು, ಸಮುವೇಲ ಸ್ನಾನಿಕನಾದ ಯೋಹಾನಂತೆ ಕಾರ್ಯ ಮಾಡಿದ್ದಾನೆ. | * ದಾವೀದನ ಸಂತಾನದಲ್ಲಿ ಬಂದ ಯೇಸು ಬೇತ್ಲೆಹೇಮಿನಲ್ಲಿಜನಿಸಿದನು(ಲೂಕ 2:4) ಮತ್ತು ಸ್ನಾನೀಕನಾದ ಯೋಹಾನನ ಮೂಲಕ ಲೋಕರಕ್ಷಕನಾಗಿ ಬೆಳಕಿಗೆ ಬಂದನು(ಯೋಹಾನ 1:29, 31, 36). |
| * ಮೂಲತಃ ಕುರುಬನಾಗಿದ್ದ, ಮುಂದೆ ಇಸ್ರಾಯೇಲ್ಯರನ್ನು ಕಾಯಲು ದೇವರು ಸಿದ್ಧಪಡಿಸಿದ್ದ (ಕೀರ್ತನೆಗಳು 78:70–72). | * ಮನುಷ್ಯರನ್ನು ಕಾಯುವ ಕುರುಬ (ಲೂಕ 6:34, ಯೆಶಾಯ 40:11), ಒಳ್ಳೆಯ ಕುರುಬ ತನ್ನ ಕುರಿಗಳಿಗಾಗಿ ತನ್ನ ಪ್ರಾಣವನ್ನೇ ಕೊಡುವವನು (ಯೋಹಾನ 10:11). |
| * ಆತನ ಸಹೋದರರಲ್ಲಿ ಕಡೆಗಣಿಸಲ್ಪಟ್ಟಿದ್ದನು. | * ಆತನ ಸಹೋದರರು ಆತನಲ್ಲಿ ನಂಬಿಕೆಯಿಟ್ಟಿರಲಿಲ್ಲ (ಕೀರ್ತನೆಗಳು 69:7–9, ಯೆಶಾಯ 53:24, ಯೋಹಾನ 7:5). |
| * ಪವಿತ್ರಶಕ್ತಿಯ ಸಂಕೇತವಾಗಿರುವ ಅಭಿಷೇಕ ತೈಲದಿಂದ ಅಭಿಷೇಕಿಸಲ್ಪಟ್ಟನು. | * ಪವಿತ್ರಶಕ್ತಿಯಿಂದ ದೀಕ್ಷಾಸ್ನಾನದ ಮೂಲಕ ಅಭಿಷೇಕಿಸಲ್ಪಟ್ಟನು(ಮತ್ತಾಯ 3:16–17) ಮತ್ತು ಪುನರುತ್ಥಾನ ಹೊಂದಿದನು. 'ಕ್ರಿಸ್ತ' ಎಂದರೆ 'ಅಭಿಷೇಕಿಸಲ್ಪಟ್ಟವನು'(ಅಪೋಸ್ತಲರ ಕೃತ್ಯಗಳು 72:36). |

# ದಾವೀದನ ಅಭಿಷೇಕದ ಆತ್ಮೀಕ ಮಹತ್ವ

ರಾಜರನ್ನು ಮತ್ತು 0ಯಾಜಕರನ್ನು ಪವಿತ್ರವಾದ ಅಭಿಷೇಕ ತೈಲದಿಂದ ಅಭಿಷೇಕಿಸುವುದು ದೇವರ ಲೆಖ್ಖದಲ್ಲಿ ಅವರನ್ನು ದೇವರ ಕೆಲಸಕ್ಕಾಗಿ ಪ್ರತಿಷ್ಠಿಸಿ ಪ್ರತ್ಯೇಕಿಸಲ್ಪಟ್ಟವರು ಎಂಬುದನ್ನು ತೋರಿಸುತ್ತದೆ(0ಯಾಜಕಕಾಂಡ 8:12).

ತೈಲವು ದೇವರ ಪವಿತ್ರಶಕ್ತಿಗೆ ಹೋಲಿಕೆ0ಯಾಗಿದೆ(2ಕೊರಿಂಥ 1:21–22) ಮತ್ತು ದೇವರು ನಮ್ಮನ್ನು ಪ್ರತಿಷ್ಠೆಪಡಿಸಿರುವುದರ ಸಂಕೇತವಾಗಿದೆ(ಅಂದರೆ ಒಬ್ಬನನ್ನು ದೇವರು ತನ್ನ ವಿಶೇಷ ಕಾ0ರ್ಯಕ್ಕಾಗಿ ಪ್ರತಿಷ್ಠೆಪಡಿಸಿರುವುದು). ಇದನ್ನು ನಾವು ದಾವೀದನನ್ನು ಅಭಿಷೇಕಿಸಿದ ನಂತರ ಹೇಗೆ ಪವಿತ್ರಶಕ್ತಿ ಆತನಲ್ಲಿ ನೆಲೆಗೊಂಡಿತು ಎಂಬುದನ್ನು ನೋಡಬಹುದು(1ಸಮುವೇಲ 16:13). ಈ ರೀತಿ ದಾವೀದನ ಅಭಿಷೇಕ ಮುಂದೆ ಮೆಸ್ಸೀ0ಯನ ಸೂಚಕವಾಗಿದೆ. **'ಮೆಸ್ಸೀ0ಯ'** ಎಂದರೆ **'ಅಭಿಷೇಕಿಸಲ್ಪಟ್ಟವನು'** ಎಂಬರ್ಥ, ಇದೇ ಪದಕ್ಕೆ ಗ್ರೀಕ್ ಭಾಷೆ0ಯ ಅರ್ಥ ಕ್ರೈಸ್ಟ್(ಅಂದರೆ ಕ್ರಿಸ್ತ) ಎಂಬುದಾಗಿದೆ.

0ಯೇಸು ದೀಕ್ಷಾಸ್ನಾನದಲ್ಲಿ ಪವಿತ್ರಶಕ್ತಿಯಿಂದ ಅಭಿಷೇಕಿಸಲ್ಪಟ್ಟನು. ಇದನ್ನು ದೇವರೇ ಸ್ಥಿರಪಡಿಸಿದ್ದಾನೆ **''ಈತನು ಪ್ರಿ0ಯನಾಗಿರುವ ನನ್ನ ಮಗನು, ನಾನು ಈತನನ್ನು ಮೆಚ್ಚಿದ್ದೇನೆ''**(ಮತ್ತಾ0ಯ 3:17, ಹೋಲಿಸಿ ನೋಡಿ 0ಯೆಶಾ0ಯ 61:1, ಇಬ್ರಿ0ಯ 1:9, 0ಯೋಹಾನ 3:34). 0ಯೇಸು ಸಂಪೂರ್ಣವಾಗಿ ದೇವರಿಗೆ ವಿಧೇ0ಯನಾಗಿ ತನ್ನ ಪ್ರಾಣವನ್ನು ಕೊಟ್ಟಿದ್ದರಿಂದ, ದೇವರು ಆತನಿಗೆ ಪುನರುತ್ಥಾನ(ಮರಣದಿಂದ ಎಬ್ಬಿಸುವುದು)ದ ಮುಖಾಂತರ ನಿತ್ಯಜೀವ ಮತ್ತು ಅಮರತ್ವ ದ0ಯಪಾಲಿಸಿದನು. ಇದನ್ನೇ ಪೇತ್ರನು ತಿಳಿಸಿದ್ದಾನೆ–

**''ಪುನರುತ್ಥಾನದ ಮೂಲಕ ದೇವರು 0ಯೇಸುವನ್ನು ಕರ್ತನು ಮತ್ತು ಅಭಿಷೇಕಿಸಲ್ಪಟ್ಟವನ್ನಾಗಿ ಮಾಡಿದ್ದಾನೆ''**(ಅಪೋಸ್ತಲರ ಕೃತ್ಯಗಳು 2:36, 3:13).

***ನಾವು ಕಲಿ0ಯತಕ್ಕ ಪಾಠ:***

* ದೇವರ ನಿಜಮಕ್ಕಳು ಸಮುವೇಲನ ರೀತಿ ಬೇರೆ0ಯವರು ದೇವರಮಾರ್ಗ ಬಿಟ್ಟು ಹೋದಾಗ ಅವರಿಗಾಗಿ ದುಃಖಿಸುತ್ತಾರೆ.
* ದೇವರು ಹೊರಗಣ ತೋರಿಕೆ0ಯನ್ನು ನೋಡುವುದಿಲ್ಲ, ಅಂತ0ರ್ಯ(ಹೃದ0ಯ)ವನ್ನೇ ನೋಡುವವನಾಗಿದ್ದಾನೆ.
* ನಾವುಗಳು ನಮ್ಮ ಸಹೋದರರ ಮುಂದೇ0ಯೇ ಕ್ರಿಸ್ತನಲ್ಲಿ ಅಭಿಷೇಕಿಸಲ್ಪಡುವುದಕ್ಕೆ ದಾವೀದನಂತೆ ಸಿದ್ದತೆಗೊಳ್ಳಬೇಕು.
* ಇತರರು ನಮ್ಮನ್ನು ಲೋಕದ ದೃಷ್ಟಿ0ಯಲ್ಲಿ ಕಡೆಗಣಿಸಿದರೂ, ನಾವು ದೇವರ ದೃಷ್ಟಿಗೆ 0ಯೋಗ್ಯರಾಗಿ ವಿಧೇ0ಯರಾಗಿ ನಡೆದರೆ ಆತನು ನಮ್ಮನ್ನು ಉನ್ನತ ಸ್ಥಿತಿಗೆ ತರುತ್ತಾನೆ.
* 0ಯಾರು ***0ಯೆಹೋವನು ಹೃದ0ಯವನ್ನೇ ನೋಡುವವನಾಗಿದ್ದಾನೆ*** ಎಂದು ಅರ್ಥಮಾಡಿಕೊಂಡು ಆತನ ವಾಕ್ಯಗಳಿಗೆ ಅನುಗುಣವಾಗಿ ನಡೆ0ಯುತ್ತಾರೋ ಅವರು ದಾವೀದ ಮತ್ತು 0ಯೇಸುವಿನಂತೆ ಪವಿತ್ರಶಕ್ತಿಯಿಂದ ಅಭಿಷೇಕಿಸಲ್ಪಡುತ್ತಾರೆ.



# ಸತ್ಯವೇದದ ಸತ್ಯಕ್ಕೆ ಆಧಾರಗಳು

## ಬ್ಯಾಬಿಲೋನಿ0ಯನ್ನರ ಆಕ್ರಮಣ

ಕೆಲವರು ಸತ್ಯವೇದವು ಒಂದು ಕಲ್ಪನೆ0ಯಾಗಿದೆ ಎಂದು ಹೇಳಬಹುದು, ಆದರೆ ಅವರ ಅಭಿಪ್ರಾ0ಯವು ತಪ್ಪಾದುದಾಗಿದೆ. ಏಕಂದರೆ ಆ ರೀತಿ ಹೇಳುವವರು ಎಂದೂ ಇದರ ಬಗ್ಗೆ ಸಂಶೋಧನೆ ಮಾಡುವವರಾಗಿರುವುದಿಲ್ಲ. ಅನೇಕ ಸಂಶೋದನೆ ಮತ್ತು ಭೂಉತ್ಕತನಗಳಿಂದ ಬಹಳ ಸ್ಪಷ್ಟವಾಗಿ ತಿಳಿದುಬಂದಿರುವ ವಿಷ0ಯವೆಂದರೆ ಸತ್ಯವೇದವು ನಿಖರವಾದ ಇತಿಹಾಸವನ್ನು ತಿಳಿಸುತ್ತದೆ ಮತ್ತು ಅದರಲ್ಲಿ ಬರೆದಿರುವ ವಿಷ0ಯಗಳೆಲ್ಲವೂ ಸತ್ಯವಾದಿದೆ ಎಂಬುದಾಗಿದೆ.

ಇದಕ್ಕೆ ಪುರಾವೆ0ಯಾಗಿ, ಮೊದಲು ಬ್ಯಾಬಿಲೋನ್ ದೇಶ ಇರಲೇ ಇಲ್ಲ ಅದು ಕೇವಲ ಕಾಲ್ಪನಿಕ ಎಂದು ಎಲ್ಲರೂ ನೆನಸಿದ್ದರು, ಆದರೆ ಸತ್ಯವೇದದ ಆಧಾರದಿಂದ ಸಂಶೋಧಿಸಿದಾಗ ಬ್ಯಾಬಿಲೋನ್ ದೇಶ ಪತ್ತೆ0ಯಾಯಿತು(ಕೆಳಗಿನ ಚಿತ್ರ). ಬ್ಯಾಬಿಲೋನ್ ಆಕ್ರಮಣದ ಬಗ್ಗೆ ಸತ್ಯವೇದದಲ್ಲಿ **2ಅರಸು 24:11–17** ರಲ್ಲಿ ತಿಳಿಸಿದೆ:

> **''ಅಷ್ಟರಲ್ಲಿ ನೆಬುಕದ್ನೆಚ್ಚರು ಬಂದನು.....ಅವನು ಇವನನ್ನು ತನ್ನ ಆಳಿಕೆ0ಯ ಎಂಟನೆ0ಯ ವರುಷದಲ್ಲಿ ಸೆರೆಹಿಡಿದನು....ಇದಲ್ಲದೆ ಅರಮನೆ0ಯ ಭಂಡಾರಗಳಲ್ಲಿದ್ದ ಎಲ್ಲಾ ದ್ರವ್ಯವನ್ನು ತೆಗೆದುಕೊಂಡುಹೋದನು...ಅವನು 0ಯೆಹೋ0ಯಾಖೀನನ್ನು ಒಟ್ಟಾಗಿ ಹತ್ತುಸಾವಿರ ಜನರನ್ನು ಸೆರೆ0ಯೊ0ಯ್ದನು.. ದೇಶದ ಪ್ರಧಾನ ಪುರುಷರು ಏಳುಸಾವಿರ ಮಂದಿ ಭಟರನ್ನೂ ಸಾವಿರ ಮಂದಿ ಕಮ್ಮಾರರು ಮೊದಲಾದ ಕೈಗಾರಿಕೆ0ಯವರನ್ನು ಬಾಬೆಲಿಗೆ ಸೆರೆ0ಯೊ0ಯ್ದನು''**

ರಾಜನಾದ 0ಯೆಹೋ0ಯಾಖೀವು 37 ವರ್ಷಗಳಕಾಲ ಸೆರೆ0ಯಲ್ಲಿದ್ದನು(**0ಯೆರೆಮೀ0ಯ 52:31–34**) ಆನಂತರ ಆತನನ್ನು ಸೆರೆಯಿಂದ ಬಿಡುಗಡೆ ಮಾಡಲಾಯಿತು, ಇದನ್ನು ತಿಳಿಸುವ ಶಾಸನ ಕೆಳಗಡೆ ಎಡಗಡೆಯಿರುವ ಶಾಸನವಾಗಿದೆ. ಇದರಲ್ಲಿ ಎಲ್ಲಾ ಘಟನೆಗಳನ್ನು ವಿವರವಾಗಿ ಕೆತ್ತಲಾಗಿದೆ.







# ಅಪರಿಚಿತ

ನಾನು ಹುಟ್ಟುವುದಕ್ಕಿಂತ ಕೆಲವು ತಿಂಗಳುಗಳ ಹಿಂದೆ ನನ್ನ ತಂದೆ ಒಬ್ಬ ಅಪರಿಚಿತನನ್ನು ಬೇಟಿಮಾಡಿದ್ದರು. ಆತನನ್ನು ಬೇಟಿಯಾದ ದಿನದಿಂದಲೂ ನನ್ನ ತಂದೆ ಆತನ ಮೋಹಗೊಳಿಸುವ, ಮಂತ್ರಮುಗ್ದಗೊಳಿಸುವ ಲಕ್ಷಣಗಳಿಗೆ ಮನಸೋತುಹೋದರು ಮತ್ತು ಬಹಳ ಬೇಗ ಆ ಅಪರಿಚಿತನನ್ನು ನಮ್ಮ ಮನೆಗೆ ಆಹ್ವಾನಿಸಲಾಯಿತು. ಆ ಅಪರಿಚಿತನನ್ನು ಬಹಳಬೇಗ ನಮ್ಮ ಮನೆಯುವರು ಒಪ್ಪಿಕೊಂಡರು ಮತ್ತು ಕೆಲವೇ ತಿಂಗಳುಗಳಲ್ಲಿ ಇಡೀ ವಿಶ್ವವೇ ಆತನನ್ನು ಸ್ವಾಗತಿಸಿತು. ನಾನು ಬೆಳೆದು ದೊಡ್ಡವನಾದಂತೆ ಎಂದೂ ಆ ಅಪರಿಚಿತನ ಸ್ಥಾನವನ್ನು ಕುರಿತು ಮನೆಯುಲ್ಲಿ ಯಾವತ್ತು ಪ್ರಶ್ನೆಮಾಡಲಿಲ್ಲ.

ನನ್ನ ಯುವಮನಸ್ಸಿನಲ್ಲಿ, ನಮ್ಮ ಮನೆಯು ಪ್ರತಿಯೊಬ್ಬರಿಗೂ ಒಂದು ಸ್ಥಾನ ಕೊಟ್ಟಿದ್ದೆ, ನನಗಿಂತ ಐದುವರ್ಷ ಹಿರಿಯುನಾದ ನನ್ನ ಅಣ್ಣ ನನಗೆ ಮಾದರಿಯಾಗಿದ್ದ. ನನ್ನ ತಂಗಿ ನನ್ನ ಅಣ್ಣನೊಡನೆ ಆಟವಾಡುತ್ತಾ ಮತ್ತು ಆ ಅಪರಿಚಿತನ ಜೊತೆಯಿಂದ ಕೀಟಲೆಮಾಡುವ ಗುಣವನ್ನು ಬೆಳೆಸಿಕೊಂಡಳು. ಆ ಅಪರಿಚಿತನ ಬಗ್ಗೆ ನನ್ನ ತಂದೆ ತಾಯಿಗಳು ಮೆಚ್ಚುಗೆ ಸೂಚಿಸಿ ನನಗೆ ಎಚ್ಚರಿಕೆ ನೀಡುತ್ತಿದ್ದರು– ಅದೇರೀತಿ ನನ್ನ ತಾಯಿ ನಾನು ದೇವರ ವಾಕ್ಯಗಳನ್ನು ಪ್ರೀತಿಸಬೇಕು ಎಂದು ತಿಳಿಸಿದರೆ, ನನ್ನ ತಂದೆ ವಾಕ್ಯಗಳಿಗೆ ವಿಧೇಯುನಾಗಿ ನಡೆಯುಬೇಕು ಎಂದು ತಿಳಿಸುತ್ತಿದ್ದರು. ಆದರೆ ಆ ಅಪರಿಚಿತ ನಮಗೆ ಕಥೆಗಳನ್ನು ತಿಳಿಸಿಕೊಡುತ್ತಿದ್ದನು. ಆತನ ಬಳಿಯುಲ್ಲಿ ಅನೇಕ ಸುಂದರವಾದ, ಕಲ್ಪನೆಗಳಿಂದಕೂಡಿದ ಭಂಡಾರವೇ ಇತ್ತು. ಜೊತೆಗೆ ಆತನು ಸಾಹಸ, ಮತ್ತು ಹಾಸ್ಯಗಳನ್ನು ದಿನವೂ ತಿಳಿಸುತ್ತಿದ್ದ. ಜೊತೆಗೆ ಆತ ನಮ್ಮ ಮನೆಯು ಸದಸ್ಯರನ್ನೆಲ್ಲಾ ಸಾಯುಂಕಾಲದ ಸಮಯುದಲ್ಲಿ ಹಲವಾರು ಗಂಟೆಗಳ ಒಂದೇಕಡೆ ಜೊತೆಗೆ ಕುಳಿತುಕೊಳ್ಳುವಂತೆ ಮಾಡುತ್ತಿದ್ದ. ನಾವು ರಾಜಕೀಯು, ಇತಿಹಾಸ ಅಥವಾ ವಿಜ್ಞಾನ ವಿಷಯುಗಳನ್ನು ತಿಳಿಯುಬೇಕಾದರೆ ಎಲ್ಲವನ್ನೂ ಆತ ತಿಳಿದಿದ್ದ ಮತ್ತು ತಿಳಿಸುತ್ತಿದ್ದ. ಆತನಿಗೆ ಹಿಂದೆ ನಡೆದ ವಿಷಯುಗಳು ತಿಳಿದಿತ್ತು, ಪ್ರಸ್ತುತ ಸ್ಥಿತಿಯುನ್ನು ಅರ್ಥಮಾಡಿಕೊಂಡಿದ್ದವನಾಗಿದ್ದ ಮತ್ತು ಮುಂದಿನ ಸಂಗತಿಗಳನ್ನು ಊಹಿಸಿ ತಿಳಿಸುತ್ತಿದ್ದ. ಆತನು ರಚಿಸುತ್ತಿದ್ದ ಚಿತ್ರಗಳು ನಮ್ಮನ್ನು ರಂಜನೆಗೊಳಿಸುತ್ತಿತ್ತು, ಅನೇಕಬಾರಿ ನಾನು ಅಳುವ ಸಂದರ್ಭದಲ್ಲಿ ಅಳು ನಿಲ್ಲಿಸಿ ನಗಿಸಲು ಸಹಕಾರಿಯಾಗಿದ್ದ. ಆತ ಇಡೀ ಕುಟುಂಬಕ್ಕೆ ಸ್ನೇಹಿತನಂತಿದ್ದ, ಆತ ನನ್ನ ತಂದೆಯುನ್ನು ನನ್ನ ಅಣ್ಣನನ್ನು ಮತ್ತು ನನ್ನನ್ನು ಮೊದಲಬಾರಿಗೆ ಬೇಸ್ ಬಾಲ್ ಪಂದ್ಯಾವಳಿಯುನ್ನು ನೋಡಲು ಕರೆದುಕೊಂಡು ಹೋಗಿ ತೋರಿಸಿದನು.

ಆತ ಯಾವಾಗಲೂ ಚಲನಚಿತ್ರ(ಸಿನಿಮಾ)ಗಳನ್ನು ನೋಡಲು ಹುರಿದುಂಬಿಸುವವನಾಗಿದ್ದ. ಜೊತೆಗೆ ಅನೇಕ ಸಿನಿಮಾ ನಟನಟಿಯುರ ಪರಿಚಯುವನ್ನು ನಮಗೆ ಮಾಡಿಸಿದವನು ಆತನೇ. ನಾನು ಮತ್ತು ನನ್ನ ಅಣ್ಣ ಇಬ್ಬರೂ ಆತನಿಂದ ಸಿನಿಮಾ ಬಗ್ಗೆ ಮತ್ತು ಸಿನಿಮಾ ನಟರ ಬಗ್ಗೆ ಬಹಳ ಪ್ರೇರೇಪಣೆಗೊಂಡೆವು. ಆ ಅಪರಿಚಿತ ನಿರಂತರವಾದ ಮಾತುಗಾರನಾಗಿದ್ದಾನೆ, ಆತನ ಮಾತುಗಳ ಬಗ್ಗೆ ನನ್ನ ತಂದೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ, ಆದರೆ ನನ್ನ ತಾಯಿ ಆತನ ಮಾತುಗಳ ಬಗ್ಗೆ ಮತ್ತು ಆತನ ಕಪೋಲ ಕಲ್ಪಿತ ವಿಚಿತ್ರ ಕಥೆಗಳ ವಿಚಿತ್ರ ತಿರುವುಗಳ ಬಗ್ಗೆ ಬೇಸರಗೊಂಡು ತನ್ನ ಕೋಣೆಗೆ ಹೋಗಿ ಸತ್ಯವೇದವನ್ನು(ಬೈಬಲ್) ಓದಿ ಪ್ರಾರ್ಥನೆಯುಲ್ಲಿ ನಿರತಳಾಗುತ್ತಿದ್ದಳು.

ನನ್ನ ತಾಯಿ ಆ ರೀತಿ ಅಪರಿಚಿತನನ್ನು ಬಿಟ್ಟು ಬೇರೆ ಹೋದಾಗ– ಆಕೆ ಆತನನ್ನು



ಬಿಟ್ಟುಹೋಗಿ ಪ್ರಾರ್ಥನೆಮಾಡಲು ಆಕೆಗೆ ಹೇಗೆ ಮನಸ್ಸು ಬರುತ್ತದೆ ಎಂದು ನಾನು ಆಶ್ಚರ್ಯಗೊಂಡಿದ್ದೇನೆ. ನಮ್ಮ ತಂದೆ ನಮ್ಮ ಮನೆಯುಲ್ಲಿ ಕೆಲವೊಂದು ನೀತಿಗಳಿಗೆ ಬದ್ಧರಾಗಿ, ಮನೆಯುವರು ಕೂಡ ಆ ನೀತಿಗಳಿಗೆ ಬದ್ಧರಾಗಿ ನಡೆಯುವ ಸಿದ್ದಾಂತವನ್ನು ಮಾಡಿದ್ದಾರೆ, ಆದರೆ ಆ ಅಪರಿಚಿತ ನಮ್ಮ ತಂದೆಯು ನೀತಿ ಮತ್ತು ಸಿದ್ಧಾಂತಗಳಿಗೆ ಗೌರವವನ್ನು ಕೊಡುವುದೇ ಇಲ್ಲ. ಉದಾಹರಣೆಗೆ:– ನಮ್ಮ ತಂದೆ ಧರ್ಮನಿಂದಕರನ್ನು ಮತ್ತು ಅಧರ್ಮವಾಗಿ ನಡೆಯುವವರು ಯಾರೇ ಆದರೂ(ಸ್ನೇಹಿತರು, ಬಂಧುಗಳು, ಪರಿಚಿತಿಯುವರು ಇತ್ಯಾದಿ) ಮನೆಗೆ ಸೇರಿಸುವುದಿಲ್ಲ, ಆದರೆ ಆ ಅಪರಿಚಿತ ನನ್ನ ತಂದೆಯು ಸಿದ್ಧಾಂತ ಮೀರಿ ನಡೆಯುವವನಾಗಿದ್ದಾನೆ. ನಮ್ಮ ತಂದೆ ಮದ್ಯಪಾನ ವಿರೋಧಿಯಾಗಿದ್ದಾರೆ, ಜೊತೆಗೆ ನಮ್ಮ ಮನೆಯುಲ್ಲಿ ಮದ್ಯವನ್ನು ಅಡುಗೆಗೆ ಉಪಯೋಗಿಸಲು ಸಹ ಅವಕಾಶ ನೀಡದವರಾಗಿದ್ದಾರೆ. ಆದರೆ ಆ ಅಪರಿಚಿತ ಮದ್ಯಗಳ ಬಗ್ಗೆ ಗಂಟೆಗಟ್ಟಲೆ ತಿಳಿಸುತ್ತಾನೆ. ಆತ ನಮಗೆ ಮದ್ಯಪಾನ ಮಾಡಲು ಮತ್ತು ಅಮಲು ಪದಾರ್ಥಗಳನ್ನು ಸೇವಿಸಲು ಆಹ್ವಾನ ನೀಡುವವನಾಗಿದ್ದಾನೆ. ಜೊತೆಗೆ ಧೂಮಪಾನ ಮಾಡಲು ಸಹ ಆಹ್ವಾನ ನೀಡುವವನಾಗಿದ್ದಾನೆ.



ಆತ ಲೈಂಗಿಕ ವಿಷಯುಗಳನ್ನು ಮುಕ್ತವಾಗಿ ಮತ್ತು ಅಧಿಕವಾಗಿ ಮಾತನಾಡುತ್ತಾನೆ. ಅವನ ಮಾತುಗಳು ಅನೇಕಬಾರಿ ಗಲಾಟೆಗಳನ್ನು, ಗಲಬೆಗಳನ್ನು ಕುರಿತಾಗಿರುತ್ತದೆ. ಆತನ ಸಲಹೆಗಳು ಕೆಲವೊಮ್ಮೆ ಒಪ್ಪಿಕೊಳ್ಳುವಂತಹವುಗಳು ಆಗಿದ್ದರೂ, ಅನೇಕಬಾರಿ ಪೇಚಿನಲ್ಲಿ ಸಿಲುಕಿಸುವಂತವುಗಳೇ ಆಗಿರುತ್ತವೆ. ಈತನಿಂದ ಸ್ತ್ರೀಪುರುಷರ ಸಂಬಂಧಗಳು ಎಷ್ಟೊಂದು ಪ್ರಭಾವಿತಗೊಂಡಿವೆ ಎಂಬುದು ನನಗೆ ಈಗ ಅರ್ಥವಾಗಿದೆ. ನಾನು ನನ್ನ ಜೀವಿತವನ್ನು ಒಮ್ಮೆ ಹಿಂತಿರುಗಿ ನೋಡಿದಾಗ, ದೇವರ ಕೃಪೆಯಿಂದಾಗಿ ಆ ಅಪರಿಚಿತನ ಪ್ರಭಾವ ನನ್ನ ಮೇಲೆ ಅತಿಹೆಚ್ಚಾಗಿ ಬೀರಿಲ್ಲ. ಆದರೆ ಕಾಲ ಬದಲಾದಂತೆ, ಆತ ಎಲ್ಲರ ಮೇಲೆ ತನ್ನ ಪ್ರಭಾವ ಬೀರಿದ್ದಾನೆ. ಆತನನ್ನು ಎಲ್ಲರೂ ಅಪರೂಪವಾಗಿ ತ್ಯಜಿಸಲು ಅವಕಾಶಕೊಡುತ್ತಾರೆ, ಆತನನ್ನು ನಿಂದಿಸುವವರು ತುಂಬಾ ಕಡಿಮೆ ಮಂದಿಯಿದ್ದಾರೆ. ಆತ ನಮ್ಮ ಮನೆಯುಲ್ಲಿ ಸುಮಾರು 30 ವರ್ಷಗಳಿಂದ ಬೀಡುಬಿಟ್ಟಿದ್ದಾನೆ. ನಾನು ಈಗಲೂ ನನ್ನ ತಂದೆಯು ಮನೆಗೆ ಹೋಗಿ ನೋಡಿದಾಗ ಆತ ನನ್ನ ತಂದೆಯು ಮನೆಯು ಮೂಲೆಯುಲ್ಲಿ ಯಾರಾದರೂ ತಾನು ಬಿಡಿಸುವ ಚಿತ್ರಗಳನ್ನು ನೋಡಲಿ ಎಂದು ಕಾಯುತ್ತಾ ಕುಳಿತಿದ್ದಾನೆ.

ಆತನ ಹೆಸರು? ಎಲ್ಲರೂ ಆತನನ್ನು ಸರಳವಾಗಿ **ಟಿ.ವಿ.** ಎಂದು ಕರೆಯುತ್ತಾರೆ.

ಕಳುಹಿಸಿದವರು:– **ಬಿಲ್ ಲಿಂಕ್**

ಮೂಲ ಲೇಖಕರು ಯಾರೆಂದು ತಿಳಿಯುದಾಗಿದೆ.

# ಸಿರಿ0ಯಾ ದೇಶದ ನವಮಾನನ ಪಾಪ ನಿವೇದನೆ ಮತ್ತು ರೋಗಪರಿಹಾರ

ನಾವು ಸತ್ಯವೇದದ ಹಳೆ0ು ಒಡಂಬಡಿಕೆ0ು 2ಅರಸುಗಳು 5ನೇ ಅಧ್ಯಾ0ುವನ್ನು ಓದಿದಾಗ ಆ ಅಧ್ಯಾ0ು ವಿಶೇಷವಾದ ಅಧ್ಯಾ0ುವಾಗಿದ್ದು ಅದರಲ್ಲಿ ಬರುವಂತಹ ವಿಷ0ುವು ನಮ್ಮ ಆತ್ಮೀಕ ಜೀವಿತಕ್ಕೆ ಬಹಳ ಮುಖ್ಯವಾದ ಪಾಠವಾಗಿದೆ.

ಈ ಅಧ್ಯಾ0ುವು ಒಬ್ಬ ಮನುಷ್ಯನು ರಕ್ಷಣೆ ಹೊಂದಬೇಕಾದರೆ ಏನು ಅವಶ್ಯಕತೆಯಿದೆ ಎಂಬುದನ್ನು ಸರಳವಾಗಿ ತಿಳಿಸುತ್ತದೆ, ಮತ್ತು ನಮಗಾಗಿ 0ೀಸುಕ್ರಿಸ್ತನ ಕಾ0ರ್ುಗಳನ್ನು ಸಹ ತಿಳಿಸಿಕೊಡುತ್ತದೆ. ಈ ಅಧ್ಯಾ0ುದ ವಿಶೇಷತೆ0ುನ್ನು ಸ್ವತಃ 0ೀಸುಕ್ರಿಸ್ತನೇ ನಮಗೆ ತಿಳಿಸಿಕೊಟ್ಟಿದ್ದಾನೆ.ಇದನ್ನು ನಾವು ಲೂಕ 4:25-27ರಲ್ಲಿ ನೋಡುವಾಗ "........ಮತ್ತು ಎಲೀಷನೆಂಬ ಪ್ರವಾದಿ0ು ಕಾಲದಲ್ಲಿ ಇಸ್ರಾ0ೇಲ್ ಜನರೊಳಗೆ ಎಷ್ಟೋಮಂದಿ ಕುಷ್ಠರೋಗಿಗಳು ಇದ್ದಾಗ್ಯೂ ಅವರಲ್ಲಿ ಒಬ್ಬನಾದರೂ ಶುದ್ಧನಾಗದೆ ಸುರಿ0ಯಾ ದೇಶದವನಾದ ನಾವಾನನು ಮಾತ್ರ ಶುದ್ಧನಾದನು''



"ಈ ಅನ್ಯದೇಶದವನಾದ ನಾಮಾನನ ಕುಷ್ಠರೋಗ ನಿವಾರಣೆ0ು ಘಟನೆ0ು ದೇವರ ರಾಜ್ಯದ ಸುವಾರ್ತೆ ಹೇಗೆ ಅನ್ಯರಿಗೂ ಸಹ ಸಾರಲ್ಪಡುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ.'' ನಾಮಾನನ ಕುಷ್ಠರೋಗ ನಿವಾರಣೆ0ು ವಿಷ0ುವನ್ನು ತಿಳಿ0ುುವ ಮೊದಲು ನಾವು 2ಅರಸು 5ನೇ ಅಧ್ಯಾ0ುದಲ್ಲಿ ಬರುವ ವಿವಿಧ ಜನರ ಪಟ್ಟಿ0ುನ್ನು ನೋಡೋಣ.



<u>ನಾಮಾನನ್ನು</u> ಈ ಕೆಳಗಿನ ಗುಣಗಳಿಂದ ಗುರುತಿಸಬಹುದು:

* ಈತ ಅನ್ಯನಾಗಿದ್ದ ಮತ್ತು ಎಲ್ಲರ ಗೌರವಕ್ಕೆ ಪಾತ್ರನಾಗಿದ್ದ
* ತನಗೆ ಕುಷ್ಠರೋಗವಿರುವುದನ್ನು ಒಪ್ಪಿಕೊಂಡಿದ್ದ(ಸಾಂಕೇತಿಕವಾಗಿ ಕುಷ್ಠವು ಪಾಪವಾಗಿತ್ತು ಮತ್ತು ಅದನ್ನು ಒಪ್ಪಿಕೊಂಡವರು ಪಾಪವನ್ನು(ಕುಷ್ಠ) ಮುಚ್ಚಿಕೊಳ್ಳಬೇಕಾಗಿತ್ತು).
* ಈತ ದೇವರ ಸಹಾ0ುವನ್ನು ಬ0ುಸುವವನಾಗಿದ್ದ
* ಪರಾಕ್ರಮಶಾಲಿ0ಯಾಗಿದ್ದ ಮತ್ತು ವಿಧೇ0ುತೆ ಹೊಂದಿದ್ದ(15ನೇ ವಚನ)
* ಪಾಪಗಳು ಕ್ಷಮಿಸಲ್ಪಟ್ಟವು(18ನೇ ವಚನ)

***<u>ಇಸ್ರಾ0ೇಲ್ ದಾಸಿ</u>* :**

* ವಿಧೇ0ುತೆ ಮತ್ತು ದೇವರ ಸುವಾರ್ತೆ0ು ಸಾಧನ
* ರಕ್ಷಣೆ0ು ಮಾರ್ಗವನ್ನು ತನ್ನ ಧಣಿಗೆ ತಿಳಿಸಿದವಳು

***<u>ಎಲೀಷ</u>* :**

* ಕ್ರಿಸ್ತನಿಗೆ ಹೋಲಿಕೆ0ಯಾಗಿದ್ದಾನೆ
* ರಕ್ಷಣೆ0ು ಮಾರ್ಗಸೂಚಿ
* ದೇವರಿಂದ ಶಕ್ತಿಹೊಂದಿದವನು ಮತ್ತು ಪಾಪದಿಂದ ರಕ್ಷಿಸಲು ಸಹಾ0ುಕನು.

ನಾವು 2ಅರಸು 5ನೇ ಅಧ್ಯಾ0ು 1-7 ವಚನಗಳನ್ನು ನೋಡುವಾಗ ನಾಮಾನನ ಬಗ್ಗೆ, ಆತನ ಸ್ಥಾನಮಾನಗಳ ಬಗ್ಗೆ ತಿಳಿಸಿಕೊಡುತ್ತದೆ. ನಾಮಾನನು ಅರಾಮ್ಯ(ಸಿರಿ0ಯಾ) ಸೈನ್ಯದ ಸೇನಾಪತಿ0ಯಾಗಿದ್ದನು, ಈತನು ಮಹಾ ಪರಾಕ್ರಮಿ0ಯಾಗಿದ್ದನು, ಈತನನ್ನು ಕಂಡರೆ ಇಸ್ರಾ0ೇಲ್ ಅರಸರಿಗೆ ಭ0ುವಿತ್ತು. ಈತನ ಪರಾಕ್ರಮಶಾಲಿ ಕೃತ್ಯಗಳಿಂದ ಸಿರಿ0ಯಾದ ರಾಜನು ನಾಮಾನನ್ನು ಸನ್ಮಾನ0ೋಗ್ಯನೆಂದು ಎಣಿಸಿದ್ದನು. ಈತ ತನ್ನ ಸಾಮ್ರಾಜ್ಯದಲ್ಲಿ ಬಹಳ ಪ್ರಸಿದ್ಧಿಪಡೆದ ವ್ಯಕ್ತಿ0ಯಾಗಿದ್ದನು. ನಾಮಾನ ಎಂದರೆ ಸುಂದರ ಅಥವಾ ಮನಮೋಹಕ ಎಂದರ್ಥ.

ನಾಮಾನ ಇಷ್ಟೆಲ್ಲಾ ಪರಾಕ್ರಮಿ0ಯಾಗಿದ್ದರೂ, ಗೌರವಕ್ಕೆ ಪಾತ್ರನಾಗಿದ್ದರೂ ಈತ ಕುಷ್ಠರೋಗಿ0ಯಾಗಿದ್ದ. ಇಸ್ರಾ0ೇಲ್ಯರಿಗೆ ಕುಷ್ಠರೋಗವು ಮೋಶೆ0ು ಧರ್ಮಶಾಸ್ತ್ರದ ಪ್ರಕಾರ(0ಯಾಜಕಕಾಂಡ 13ನೇ ಅಧ್ಯಾ0ು) ಪಾಪವಾಗಿತ್ತು. 0ಯಾರಿಗೆ ಈ ರೋಗ ಬಂದಿದೆ0ೋ ಅವರು ಆತ್ಮೀಕವಾಗಿ ಪಾಪಿಗಳಾಗಿದ್ದು ಅವರನ್ನು ಊರಿನಿಂದ ಹೊರಗೆ ಹಾಕಲಾಗುತ್ತಿತ್ತು, ಅಂದರೆ ಕುಷ್ಠವು ಪಾಪಕ್ಕೆ ಸಂಕೇತವಾಗಿದೆ.

ಆದರೆ ಅನ್ಯರು ಕುಷ್ಠರೋಗವನ್ನು ಇಸ್ರಾ0ೇಲ್ಯರಷ್ಟು ಗಂಬೀರವಾಗಿ ಪರಿಗಣಿಸಿರಲಿಲ್ಲ ಮತ್ತು ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ. ಅಂದರೆ ಅನ್ಯರು ಪಾಪದ ಅರ್ಥವನ್ನು ಸರಿ0ಯಾಗಿ ಮಾಡಿಕೊಂಡಿರಲಿಲ್ಲ. ಅವರು ಕುಷ್ಠರೋಗವು ಕೇವಲ ಜೀವಕ್ಕೆ ಅಪಾ0ು ಎಂದು ನೆನಸಿದ್ದರೆ ವಿನಃ ಅದು ಪಾಪ ಮತ್ತು ನಾಚಿಕೆಗೆ ಕಾರಣವಾಗಿದೆ ಎಂದು ನೆನಸಿರಲಿಲ್ಲ. 0ೆಹೂದ್ಯರು(ಇಸ್ರಾ0ೇಲ್ಯರು) ಕುಷ್ಠರೋಗದಿಂದ ಗುಣಹೊಂದಲೇ ಬೇಕಾಗಿತ್ತು, ಏಕಂದರೆ ಅವರು ದೇವರ ಬಳಿಗೆ ಬರಬೇಕಾದರೆ ಶುದ್ಧವಾಗಿರಬೇಕಾಗಿತ್ತು, ಆದರೆ ಅನ್ಯರು ಕುಷ್ಠರೋಗದಿಂದ

ಗುಣಮುಖರಾಗಲು ಬಯಸುತ್ತಿದ್ದುದು ಕೇವಲ ಖಾಯಿಲೆಯಿಂದ ಗುಣವಾಗಲು ಮಾತ್ರ. ಈ ವಿಷಯವನ್ನು ಇಂದಿಗೆ ಹೋಲಿಕೆಮಾಡಿ ನೋಡಿದಾಗ ಇಂದಿನ ಜನತೆಗೆ ''ನಿಜವಾದ ಸತ್ಯ''ದ ಅವಶ್ಯಕತೆ ಇಲ್ಲ, ಕೇವಲ ತಮ್ಮ ಕ್ಷಣಿಕ ಸುಖದ ಆಶೆಗೆ ಬೀಳುತ್ತಿದ್ದಾರೆ. ಯಾವುದರಿಂದ ನಿಜವಾಗಿ ರಕ್ಷಣೆ ಹೊಂದಬಹುದಾಗಿದೆ ಎಂಬ ಬಹುಮುಖ್ಯ ವಿಷಯದ ಬಗ್ಗೆ ಎಲ್ಲರೂ ಅಲಕ್ಷ್ಯಮಾಡುತ್ತಾರೆ.

ಆದರೆ ನಾಮಾನನ ವಿಷಯವನ್ನು ನೋಡುವಾಗ ಆತ ಯೆಹೋವನ ದೃಷ್ಟಿಗೆ ನೀತಿವಂತನೆಂದು ಕಂಡುಬಂದದರಿಂದ ಅವನಿಗೆ ಕುಷ್ಠರೋಗದ ಪರಿಸ್ಥಿತಿಯಿಂದ ಹೊರಕ್ಕೆ ಬರಮಾಡಿ ರಕ್ಷಣೆಯ ಮಾರ್ಗವನ್ನು ತೋರಿಸಿಕೊಟ್ಟಿದ್ದಾನೆ.

**ಇಸ್ರಾಯೇಲಿನ ದಾಸಿಯಾದ ಹುಡುಗಿಯ ಮುಖಾಂತರ ಸುವಾರ್ತೆ:**

ಆ ಕಾಲದಲ್ಲಿ ಇಸ್ರಾಯೇಲ್ಯರಿಗೆ ಮತ್ತು ಅರಾಮ್ಯ(ಸಿರಿಯನ್ನರು)ರಿಗೆ ಯುದ್ಧಗಳೇನು ನಡೆಯುತ್ತಿಲ್ಲದಿದ್ದರೂ, ಸಿರಿಯನ್ನರ ಸುಲಿಗೆಕೋರರು ಇಸ್ರಾಯೇಲ್ ರಾಜ್ಯದ ಉತ್ತರ ಭಾಗದ ಗಡಿಯ ಪ್ರಾಂತ್ಯಗಳಿಗೆ ಆಕ್ರಮಣ ಮಾಡಿ ಸುಲಿಗೆ ಮಾಡುತ್ತಿದ್ದರು.

''ಆ ರೀತಿಯಾದ ಒಂದು ಸಂದರ್ಭದಲ್ಲಿ ಸುಲಿಗೆಕೋರರು ಒಬ್ಬ ಇಸ್ರಾಯೇಲಿನ ಹುಡುಗಿಯನ್ನು ಸೆರೆಹಿಡಿದುಕೊಂಡು ಹೋದರು, ಆಕೆ ನಾಮಾನನ ಹೆಂಡತಿಯ ದಾಸಿಯಾದಳು.'' ಆ ಹುಡುಗಿಯ ಗುಣಲಕ್ಷಣಗಳಿಗೆ ಮೆಚ್ಚಿಕೊಂಡ ನಾಮಾನನ ಹೆಂಡತಿ ಆಕೆಯನ್ನು ಪ್ರೀತಿಪಾತ್ರಳಾದ ದಾಸಿಯನ್ನಾಗಿ ಮಾಡಿಕೊಂಡಳು. ಒಂದು ಸಾರಿ ದಾಸಿಯಾದ ಇಸ್ರಾಯೇಲಿನ ಆ ಹುಡುಗಿಯು ತನ್ನ ಯಜಮಾನಿಗೆ –''ನಮ್ಮ ದಣಿಯು(ನಾಮಾನನು) ಸಮಾರ್ಯದಲ್ಲಿರುವ ಪ್ರವಾದಿಯ ಪತ್ತಿರವಿದ್ದರೆ ಎಷ್ಟೋ ಒಳ್ಳೇದಾಗುತ್ತಿತ್ತು, ಅವನು ಇವನನ್ನು ಕುಷ್ಠರೋಗದಿಂದ ವಾಸಿಮಾಡುತ್ತಿದ್ದನು'' ಎಂದು ಹೇಳಿದಳು.

ಆಕೆ ದಾಸಿಯಾಗಿದ್ದರೂ ಸಹ ತನ್ನ ದೇವರ ಪ್ರವಾದಿಯು ಈ ಕಾರ್ಯವನ್ನು ಮಾಡಲು ಶಕ್ತನಾಗಿದ್ದಾನೆ ಎಂಬುದನ್ನು ಮನಗಂಡು ಅರಾಮ್ಯನಾದ ನಾಮಾನನ ಹೆಂಡತಿಗೆ ಈ ಶುಭವರ್ತಮಾನವನ್ನು ತಿಳಿಸಿದ್ದಾಳೆ ಎಂದು ನಾವು ಮನಗಾಣಬಹುದಾಗಿದೆ.

ಅಂದು ಇಸ್ರಾಯೇಲ್ಯರಲ್ಲಿ ಅನೇಕ ಕುಷ್ಠರೋಗಿಗಳಿದ್ದರು, ನಾವು 2ಅರಸು 7:1–3 ವಾಕ್ಯಗಳನ್ನು ನೋಡುವಾಗ ಅನೇಕ ಮಂದಿ ಕುಷ್ಠರೋಗಿಗಳು ಅರಮನೆಯ ಕೋಟೆಯ ಹೊರಗೆ ಇದ್ದುದನ್ನು ನೋಡಬಹುದು. ಆದರೂ ಸಹ ದಾಸಿಯಾದ ಆ ಹುಡುಗಿಯ ಮುಖಾಂತರ ಯೆಹೋವನು ತನ್ನ ಸಾಕ್ಷಿಯನ್ನು ಕೊಡುವುದಕ್ಕೋಸ್ಕರ ಅನ್ಯರಿಗೆ ತನ್ನ ಸುವಾರ್ತೆಯನ್ನು ಪ್ರಕಟಪಡಿಸಿದ್ದಾನೆ. ಏಕಂದರೆ ಆ ದಾಸಿಯು ದೇವರ ವಿಷಯವನ್ನು ತಿಳಿಸಲು ಹೆದರಲಿಲ್ಲ, ನಾಚಿಕೆಪಡಲಿಲ್ಲ. ಆಕೆ ಯೆಹೋವನನ್ನು ಸ್ಥಿರವಾಗಿ ನಂಬಿದ್ದಳು, ಏಕಂದರೆ ಕೀರ್ತನೆಗಳು 34:7 ರಲ್ಲಿ ತಿಳಿಸಿರುವಂತೆ ''ಯೆಹೋವನ ಭಯ ಭಕ್ತಿಯುಳ್ಳವರ ಸುತ್ತಲೂ ಆತನ ದೂತನು ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ'' ಎಂದು ತಿಳಿಸಿದೆ. ಈ ವಾಕ್ಯಗಳಲ್ಲಿ ಆಕೆಗೆ ಸಂಪೂರ್ಣ ಭರವಸವಿತ್ತು. ಇದೇ ವಿಷಯವಾಗಿ ಕುರಿತಂತೆ ಪೌಲನು 2ಕೊರಿಂಥ 11:2ರಲ್ಲಿ ''ಯಾಕಂದರೆ ದೇವರಲ್ಲಿರುವ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧಕನ್ಯೆಯಂತೆ



ನಿಶ್ಚಯಮಾಡಿದೆನಲ್ಲಾ.'' ಅಂದರೆ ಪೌಲನು ಇಲ್ಲಿ ಅನ್ಯರಾಗಿರುವ ನಮ್ಮನ್ನು ಕ್ರಿಸ್ತನಿಗೋಸ್ಕರ ಸುವಾರ್ತೆಯ ಮೂಲಕ ನಿಶ್ಚಯ ಮಾಡಿದ್ದಾನೆ. ಅಂತೆಯೇ ಅಂದು ಆ ದಾಸಿಯಾದ ಹುಡುಗಿಯು ತನ್ನ ಧಣಿಗೆ ಮಾತಿನ ಮೂಲಕ ದೇವರ ವಾಕ್ಯ(ಸುವಾರ್ತೆ)ವನ್ನು ತಿಳಿಸಿದ್ದಾಳೆ.

ದಾಸಿಯಾದ ಆ ಹುಡುಗಿಯ ಮಾತು ಅಂದು ಸಿರಿಯಾ(ಅರಾಮ್)ದೇಶದಲ್ಲಿ ಆಶ್ಚರ್ಯಕರವಾದ ಕೆಲಸವನ್ನು ನಡೆಸಿತು. ಇಸ್ರಾಯೇಲ್ ದೇಶದಲ್ಲಿ ಅನೇಕ ಮಹತ್ಕಾರ್ಯಗಳು ನಡೆಯುತ್ತವೆ ಎಂದು ಸಿರಿಯನ್ನರು ಕೇಳಿದ್ದರು, ಅದೇರೀತಿ ಈಗ ದಾಸಿಯಾದ ಆ ಹುಡುಗಿಯ ಮಾತುಗಳನ್ನು ಅವರುಗಳು ನಂಬಿದರು ಮತ್ತು ಅಂದಿನ ಸಿರಿಯನ್ನರ ಅರಸನಾದ ಬೆನ್ಹದದನಿಗೆ ಸಹ ಈ ವಿಷಯ ತಿಳಿದುಬಂತು. ಸಿರಿಯಾದ ಅರಸನು ಈ ಮಾತುಗಳನ್ನು ನಂಬಿದನು ಮತ್ತು ನಾಮಾನನ ಕುಷ್ಠ ಗುಣವಾಗುವ ವಿಷಯದಲ್ಲಿ ಸಂತೋಷವುಳ್ಳವನಾದನು. ಅರಸನಾದ ಬೆನ್ಹದದನು ನಾಮನನ್ನು ಮತ್ತು ಒಬ್ಬ ರಾಯಭಾರಿಯ ಜೊತೆಯಲ್ಲಿ ಸಮಾರ್ಯಕ್ಕೆ ಕಳುಹಿಸಿ, ಇಸ್ರಾಯೇಲ್ ಅರಸನಾದ ಯೋರಾಮನಿಗೆ, ನೀನು ನಾಮಾನನ ಕುಷ್ಠರೋಗವನ್ನು ಮಹಾತ್ಕಾರ್ಯದ ಮೂಲಕ ವಾಸಿಮಾಡಬೇಕು ಎಂಬ ಆಜ್ಞೆಯುಳ್ಳ ಕಾಗದವನ್ನು ಕಳುಹಿಸಿದನು, ಜೊತೆಗೆ ಅನೇಕ ಅಮೂಲ್ಯ ಕಾಣಿಕೆಗಳನ್ನು, ಉಡುಗೊರೆ, ಬಹುಮಾನಗಳನ್ನು ಕಳುಹಿಸಿದನು. ಸಿರಿಯನ್ನರ ಅರಸನಾದ ಬೆನ್ಹದದನು ಸರ್ವಾಧಿಕಾರಿಯಾದ ರಾಜನಾಗಿದ್ದದರಿಂದ, ಪ್ರವಾದಿಯು ಬಂದು ಕುಷ್ಠವನ್ನು ವಾಸಿಮಾಡುತ್ತಾನೆ ಎಂದು ತನ್ನ ಅಧಿಕಾರಕ್ಕೆ ತಕ್ಕಂತೆ ಯೋಚಿಸಿದ್ದನು, ಜೊತೆಗೆ ಪ್ರವಾದಿಯು ಇಸ್ರಾಯೇಲ್ ಅರಸನಿಗೆ ಅಧೀನನಾಗಿದ್ದು ಅವನು ಹೇಳುವಂತೆ ಕೇಳುತ್ತಾನೆ ಎಂದು ಭಾವಿಸಿಕೊಂಡಿದ್ದನು. ಆದರೆ ಅರಸನಾದ ಬೆನ್ಹದದನಿಗೆ ಪ್ರವಾದಿಯು ಯಾವ ರಾಜನಿಂತಲೂ ಉನ್ನತವಾದ ಸ್ಥಾನವನ್ನು ಹೊಂದಿದ್ದಾನೆ ಮತ್ತು ಆತ ಯೆಹೋವ ದೇವರಿಗೊಬ್ಬನಿಗೆ ಅಧೀನವಾಗಿದ್ದಾನೆ ಎಂಬ ವಿಷಯ ತಿಳಿದಿರಲಿಲ್ಲ. ಈ ನಡುವೆ ಅರಾಮ್ಯರ(ಸಿರಿಯನ್ನರ) ರಾಯಭಾರಿ ಸಮಾರ್ಯಕ್ಕೆ ಆಗಮಿಸಿ ಬೆನ್ಹದದನನ ಕಾಗದವನ್ನು ಇಸ್ರಾಯೇಲ್ಯರ ಅರಸನಾದ ಯೋರಾಮನಿಗೆ ಕೊಟ್ಟನು. ಆ ಪತ್ರದಲ್ಲಿ ''–ನನ್ನ ಸೇವಕನಾದ ನಾಮಾನನ್ನು ನಿನ್ನ ಬಳಿಗೆ ಕಳುಹಿಸಿದ್ದೇನೆ; ನೀನು ಅವನ ಕುಷ್ಟರೋಗವನ್ನು ವಾಸಿಮಾಡತಕ್ಕದ್ದು''(2ಅರಸು 5:6) ಎಂದು ಬರೆಯಲ್ಪಟ್ಟಿತ್ತು.



ಇದೆಂತಹ ಬೇಡಿಕೆ! ಇಸ್ರಾಯೇಲಿನ ಅರಸನಾದ ಯೋರಾಮನು ನಾಮಾನನ ಕುಷ್ಠವನ್ನು ಹೇಗೆ ಗುಣಪಡಿಸಬಲ್ಲ! ಈ ಪತ್ರದಿಂದ ಇಸ್ರಾಯೇಲ್ಯರ ಅರಸನಿಗೆ ಅನಿಸಿದ್ದೆಂದರೆ, ಅರಾಮ್ಯರ ಅರಸು ನನ್ನೊಡನೆ ಜಗಳವಾಡಲು ಕಾರಣ ಹುಡುಕುತ್ತಿದ್ದಾನೆ ಎಂದು ತನ್ನ ಪರಿವಾರದವರಿಗೆ

ತಿಳಿಸಿದನು. ಆ ಪತ್ರ ನೋಡಿದ ತಕ್ಷಣ ಆತನಿಗೆ ಏನುಮಾಡಲೂ ತೋಚಲಿಲ್ಲ, ಆದ್ದರಿಂದ– ''ಆ ಪತ್ರವನ್ನು ಓದಿದ ತಕ್ಷಣ ತನ್ನ ಬಟ್ಟೆಗಳನ್ನು ಹರಿದುಕೊಂಡು.......ನಾನೇನು ದೇವರೋ? ಜೀವದಾನ ಮಾಡುವುದಕ್ಕಾಗಲೀ, ಸಾಯಿಸುವುದಕ್ಕಾಗಲೀ ನನಗೆ ಸಾಮರ್ಥ್ಯವುಂಟೋ ಎಂದನು''(2ಅರಸು 5:7).

ಆದರೆ ಈ ವಿಷಯ ಪ್ರವಾದಿಯಾದ ಎಲೀಷನಿಗೆ ತಿಳಿದ ತಕ್ಷಣ–''ಇಸ್ರಾಯೇಲ್ಯರ ಅರಸನು ತನ್ನ ಬಟ್ಟೆಗಳನ್ನು ಹರಿದುಕೊಂಡನೆಂಬುದನ್ನು ದೇವರ ಮನುಷ್ಯನಾದ ಎಲೀಷನು ಕೇಳಿ ದೂತರ ಮುಖಾಂತರವಾಗಿ ಅವನಿಗೆ– ನೀನು ನಿನ್ನ ಬಟ್ಟೆಗಳನ್ನು ಹರಿದುಕೊಂಡಿದ್ದೇಕೆ? ಅವನನ್ನು ನನ್ನ ಬಳಿಗೆ ಕಳುಹಿಸು; ಇಸ್ರಾಯೇಲ್ಯರಲ್ಲಿ ಒಬ್ಬ ಪ್ರವಾದಿಯಿದ್ದಾನೆಂಬುದು ಅವನಿಗೆ ಗೊತ್ತಾಗಲಿ ಎಂದು ಹೇಳಿಕಳುಹಿಸಿದನು''(2ಅರಸು 5:8).

ಅಂದು ಇಸ್ರಾಯೇಲ್ಯರ ಅರಸ ಮತ್ತು ಅರಾಮ್ಯರ ಅರಸನಿಗಿಂತ ಹೆಚ್ಚಾದ ನಂಬಿಕೆಯನ್ನು ಚಿಕ್ಕ ಹುಡುಗಿಯಾದ ದಾಸಿಯು ಯೆಹೋವನಲ್ಲಿ ಹೊಂದಿದ್ದು, ಆಕೆ ನಾಮಾನನ ರೋಗವನ್ನು ಗುಣಪಡಿಸಲು ಎಲೀಷ ಪ್ರವಾದಿಯಿಂದ ಮಾತ್ರ ಸಾದ್ಯ ಎಂಬ ಸುವಾರ್ತೆಯನ್ನು ಸಾರಿದ್ದಾಳೆ.

## ನಾಮಾನನ ಅನುಚಿತ ಮನೋವೃತ್ತಿ (2ಅರಸು 5:8–12):

ನಾವು ಮೇಲಿನ ಅಧ್ಯಾಯದ ಮೊದಲ ಭಾಗದಲ್ಲಿ ಇಸ್ರಾಯೇಲಿನ ಅರಸ ತಳಮಳವನ್ನು ನೋಡಿದ್ದೇವೆ. ಈಗ ನಾಮಾನನ್ನು ಪ್ರವಾದಿಯಾದ ಎಲೀಷನ ಬಳಿಗೆ ಕಳುಹಿಸಿದ ಸಂದರ್ಭದಲ್ಲಿ ಆತನ ಅನುಚಿತ ಮನಸ್ಥಿತಿಯನ್ನು ಅಧ್ಯಯನ ಮಾಡೋಣ. ನಾಮಾನನು ಎಲೀಷನ ಬಳಿಗೆ ಕಳಿಹಿಸಿದ ಸಂದರ್ಭದಲ್ಲಿ, ಇಂದು ಲೋಕದಲ್ಲಿ ಎಲ್ಲರೂ ಯೋಚಿಸುವ ರೀತಿಯಲ್ಲೇ ಆತನೂ ಕೂಡ ಯೋಚಿಸಿದ್ದ ಮತ್ತು ಎರಡು ರೀತಿಯ ತಪ್ಪುಗಳನ್ನು ಆತ ಮಾಡಿದ. ಮೊದಲನೆಯದಾಗಿ –ಆತ ರಾಜ ಮತ್ತು ಪ್ರವಾದಿಯನ್ನು ತನ್ನ ಅಧಿಕಾರ, ಬಹುಮಾನಗಳಿಂದ ಸಂತೃಪ್ತಿಗೊಳಿಸಬಹುದು ಎಂದು ನೆನಸಿದ್ದ. ಇದನ್ನು ನಾವು 9ನೇ ವಾಕ್ಯವನ್ನು ನೋಡುವಾಗ ''ರಥರಥಾಶ್ವಗಳೊಡನೆ ಎಲೀಷನ ಮನೆಯ ಬಳಿಗೆ ಹೋಗಿ ಬಾಗಿಲಿನ ಮುಂದೆ ನಿಂತನು''. ಈ ವಾಕ್ಯವನ್ನು ನೋಡುವಾಗ ಒಬ್ಬ ಕುಷ್ಠರೋಗಿಯಾದ ನಾಮಾನನು ಪ್ರವಾದಿಯ ಬಳಿಗೆ ಇಷ್ಟೊಂದು ಅಧಿಕಾರಯುತವಾಗಿ, ವೈಭವದಿಂದ ಬರವುದಕ್ಕೆ ಬದಲಾಗಿ, ಆತ ವಿಧೇಯತೆಯಿಂದ ಪ್ರವಾದಿಯ ಬಳಿಗೆ ಬರಬೇಕಾಗಿತ್ತು. ಎರಡನೆಯದಾಗಿ –ಎಲೀಷ ತನ್ನ ಕುಷ್ಠವನ್ನು ಯಾವ ರೀತಿ ಗುಣಪಡಿಸುತ್ತಾನೆ ಎಂಬುದರ ಬಗ್ಗೆ ಆತನು ತಪ್ಪುತಿಳುವಳಿಕೆಯುಳ್ಳವನಾಗಿದ್ದ, ಆತ ಎಲೀಷ ಮನೆಯಿಂದ ಹೊರಗೆಬಂದು ತನ್ನ ದೇವರಾದ ಯೆಹೋವನ ಹೆಸರು ಹೇಳಿ ಕುಷ್ಠದ ಮೇಲೆ ಕೈಯಾಡಿಸಿ ವಾಸಿಮಾಡುತ್ತಾನೆ(2ಅರಸು 5:11) ಎಂದು ಯೋಚಿಸಿದ್ದನು.

ಆದರೆ ಇಲ್ಲಿ ಯೆಹೋವದೇವರು ತನ್ನ ಸೇವಕನಾದ ಪ್ರವಾದಿಯ ಮೂಲಕ ಹೇಗೆ ಕಾರ್ಯ ಮಾಡಿದ ಎಂಬುದನ್ನು ಅರ್ಥಮಾಡಿಕೊಳ್ಳಲು ನಾಮಾನನು ವಿಫಲನಾದನು. ಅದೇರೀತಿ ಇಂದು ಅನೇಕ ಜನರು ಯೇಸುವಿನ ಸುವಾರ್ತೆಯ ಬಗ್ಗೆ, ದೀಕ್ಷಾಸ್ನಾನದ ಮಹತ್ವದ ಬಗ್ಗೆ ತಿಳಿದುಕೊಳ್ಳಲು ವಿಫಲರಾಗಿದ್ದಾರೆ. ಅವರ ಮನಸ್ಸಿನಲ್ಲಿ ದೀಕ್ಷಾಸ್ನಾನ ಅರ್ಥವಿಲ್ಲದ್ದು ಎಂದು ಕೆಲವರು ನೆನಸಿದರೆ, ಕೆಲವರು ಮಕ್ಕಳಿಗೆ ನೀರನ್ನು ಚುಮುಕಿಸದರೆ ಸಾಕು ಎಂದು ನಾಮಾನನ ರೀತಿಯಲ್ಲಿ ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ.



ಅಂದು ಪ್ರವಾದಿಯಾದ ಎಲೀಷನು ತನ್ನ ಸೇವಕನ ಮುಖಾಂತರ ನಾಮಾನನಿಗೆ –ನೀನು ಯೋರ್ದನ್ ಹೊಳೆಗೆ ಹೋಗಿ ಏಳುಸಾರಿ ಸ್ನಾನಮಾಡು ನಿನಗೆ ವಾಸಿಯಾಗುವುದು ಎಂದು ಹೇಳಿಕಳುಹಿಸಿದನು. ಇದರಿಂದ ನಾಮಾನನಿಗೆ ಕೋಪವುಂಟಾಗಿ, ದಮಸ್ಕದ ಅಬಾನಾ, ಪರ್ಪರ್ ಎಂಬ ಹೊಳೆಗಳು ಇಸ್ರಾಯೇಲ್ಯರ ಎಲ್ಲಾ ಹೊಳೆ ಹಳ್ಳಗಳಿಗಿಂತ ಉತ್ತಮವಾಗಿವೆಯಲ್ಲಾ? ಎಂದನು(2ಅರಸು 5:12).

## ನಾಮಾನನು ದೀಕ್ಷಾಸ್ನಾನಕ್ಕೆ ಒಪ್ಪಿಸಿಕೊಂಡದ್ದು ಮತ್ತು ಪರಿವರ್ತನೆ:

ನಾಮಾನನು ಅನುಚಿತವಾಗಿ ಕೋಪಗೊಂಡರೂ ಸಹ, ಅವನ ಸೇವಕರಲ್ಲಿ ಒಳ್ಳೆಯ ಹೃದಯವುಳ್ಳ ಸೈನಿಕರು ಇದ್ದರು ಅವರು, ಮುಂದೆಬಂದು ನಾಮಾನನಿಗೆ –ಅಪ್ಪನವರೇ, ಪ್ರವಾದಿಯು ಒಂದು ಕಠಿನವಾದ ಕೆಲಸವನ್ನು ಹೇಳಿದ್ದರೆ ಅದನ್ನು ಮಾಡುತ್ತಿದ್ದಿರಲ್ಲಾ; ಹಾಗಾದರೆ ಸ್ನಾನಮಾಡಿ ಶುದ್ಧನಾಗು ಎಂದು ಹೇಳಿದರೆ ಯಾಕೆ ಅದರಂತೆ ಮಾಡಬಾರದು ಅಂದರು(2ಅರಸು 5:13).



ಇದೊಂದು ಅತ್ಯುತ್ತಮವಾದ ಸಲಹೆಯಾಗಿದೆ, ಆ ಸಮಯಕ್ಕೆ ಅನುಗುಣವಾಗಿ, ಅವನ ಸೇವಕರು ಈ ಮಾತನ್ನು ತಿಳಿಸಿದ್ದರಿಂದ ನಾಮಾನನು ಯೋರ್ದನ್ ಹೊಳೆಗೆ ಹೋಗಿ ಅಲ್ಲಿ ದೀಕ್ಷಾಸ್ನಾನಕ್ಕೆ ಒಳಪಟ್ಟನು. ಆತ ಆರು ಬಾರಿ ನೀರಿನಲ್ಲಿ ಮುಳುಗಿದಾಗ ಏನೂ ಬದಲಾವಣೆ ಉಂಟಾಗಲಿಲ್ಲ, ಆದರೆ ಏಳನೇ ಬಾರಿ ನೀರಿನಲ್ಲಿ ಮುಳುಗಿ ಮೇಲಕ್ಕೆ ಬಂದಾಗ ಒಂದು ಅದ್ಭುತಕಾರ್ಯ ನಡೆದಿತ್ತು! ಆತನ ಕುಷ್ಠ ಸಂಪೂರ್ಣವಾಗಿ ಗುಣವಾಗಿ ಆತ ನೂತನ ಮನುಷ್ಯನಾಗಿದ್ದ(2ಅರಸು 5:14).

ನಾಮಾನನು ನೀರಿನಿಂದ ಹೊರಗೆ ಬಂದಾಗ ಆತ ಬದಲಾದ ಹೊಸ ಮನುಷ್ಯನಾಗಿದ್ದ, ಆತ ಸಂತೋಷದಿಂದ ಎಲೀಷನ ಮನೆಗೆ ಹಿಂತಿರುಗಿಬಂದು, ಅವನ ಮುಂದೆ ನಿಂತು –ಇಸ್ರಾಯೇಲ್ ದೇಶದಲ್ಲಿರುವ ದೇವರ ಹೊರತಾಗಿ ಲೊಕದಲ್ಲಿ ಬೇರೆ ದೇವರು ಇರುವುದಿಲ್ಲವೆಂದು ಈಗ ನನಗೆ ಗೊತ್ತಾಯಿತು(2ಅರಸು 5:15) ಎಂದು ಹೇಳಿದನು. ಇದು ನಂಬಿಕೆಯಿಂದ ತಿಳಿಸಿದ ಪ್ರಕಟನೆಯಾಗಿದೆ. ಆಗ ನಾಮಾನನು ಎಲೀಷನಿಗೆ ಬಹುಮಾನವನ್ನು ಕೊಟ್ಟು ಸನ್ಮಾನಿಸಬೇಕೆಂದುಕೊಂಡನು, ಆದರೆ ಎಲೀಷನು ಏನನ್ನೂ ತೆಗೆದುಕೊಳ್ಳಲಿಲ್ಲ, ಏಕಂದರೆ ಎಲೀಷನಿಗೆ ನಾಮನನ ಸನ್ಮಾನಕ್ಕಿಂತ ದೇವರಿಂದ ಬರುವ ಸನ್ಮಾನ ಮುಖ್ಯವಾಗಿತ್ತು.

ಈ ರೀತಿಯಾಗಿ ನಾಮಾನನು ತನ್ನನ್ನು ದೇವರಿಗೆ ಸಮರ್ಪಿಸಿಕೊಂಡು ದೀಕ್ಷಾಸ್ನಾನದ ಮೂಲಕ ತನ್ನ ಪಾಪಕ್ಕೆ ಕ್ಷಮಾಪಣೆಹೊಂದಿ ನಿಜದೇವರಾದ ಯೆಹೋವನನ್ನು ಆರಾಧಿಸಲು ತಿಳಿದುಕೊಂಡನು.